

## ಸರ್ವಮೂಲ ಸಂದೇಶ

ಕುರು ಭುಙ್ಕ್ಷ್ವ ಚ ಕರ್ಮ ನಿಜಂ ನಿಯತಂ।
ಹರಿಪಾದವಿನಮ್ರಧಿಯಾ ಸತತಂ॥

ನೀನು ಎಲ್ಲಾ ವಿಷಯಭೋಗಗಳನ್ನು ಬಿಡುವುದು ಬೇಡ. ಶಾಸ್ತ್ರ ನಿಷಿದ್ಧವಲ್ಲದ ವಿಷಯಗಳನ್ನು ಭೋಗಿಸು. ಸತ್ಕರ್ಮಗಳನ್ನೇ ಮಾಡುತ್ತಾ ಇರು. ಸತ್ಕರ್ಮಗಳ ಪ್ರಭಾವದಿಂದ ಉತ್ತಮ ಗುರುಗಳ ಲಾಭವಾಗಿ, ಅವರ ಉಪದೇಶದಿಂದ ನಿನಗೆ ಸಂಶಯವು ಪರಿಹಾರವಾಗಿ ಯಥಾರ್ಥ ನಿರ್ಣಯವು ಪ್ರಾಪ್ತವಾಗುತ್ತದೆ. ಅನಂತರ ಶ್ರೀ ಹರಿಪಾದಗಳಲ್ಲಿ ವಿನಮ್ರ ಬುದ್ಧಿಯುಳ್ಳವನಾಗಿ ಸರ್ವವನ್ನೂ ಶ್ರೀ ಹರಿಗೆ ಸಮರ್ಪಿಸಿ ಅವನ ಪರಮ ಪ್ರಸಾದದಿಂದ ಪರಮಪದವನ್ನು ಹೊಂದುವಿ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–೭ ಸಂಚಿಕೆ–೩ ಸರ್ವಜಿತ್ ಸಂ.॥ ಮಾಘ–ಫಾಲ್ಗುಣ ಮಾರ್ಚ್ ೨೦೦೮**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

## ವಿಷಯಾನುಕ್ರಮಣಿಕೆ


ವಿದ್ವತ್ ಪ್ರಪಂಚ– ಶ್ರೀ ವಿದ್ಯಾಮಾನ್ಯ ತೀರ್ಥರು 1

ಮುಖಪುಟ ಲೇಖನ 3

ರಜತಪೀಠ ಮಹಾತ್ಮ್ಯೆ 5

ಉಪನಿಷತ್ ಚಿಂತನ 7

ಯುವಚಿಂತನ 9

ಶ್ರೀಮಧ್ವಚರಿತ್ರೆ– ಅನಂತಕೃಷ್ಣ ಆಚಾರ್ಯ 11

ದಾಸ ಸಾಹಿತ್ಯಸಾರ – ವಿ॥ ಹಯವದನ ಪುರಾಣಿಕ 14

19

ಉಪನಿಷತ್ ಸಂದೇಶ 23

ಆಧ್ಯಾತ್ಮ ಪ್ರವೇಶ 25

ಪುರಾಣ ಪರಿಚಯ 27


**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದನೆ ಹಾಗೂ ನಿರ್ವಹಣೆ:** ಶ್ರೀ ಅನಂತಕೃಷ್ಣ ಆಚಾರ್ಯ, ಉಡುಪಿ

**ಸಲಹಾ ಮಂಡಳಿ:**
ವಿಬಲರಾಮ ಭಟ್ಟ, ಉಡುಪಿ
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಗಿರೀಶ ಉಪಾಧ್ಯಾಯ, ಉಡುಪಿ

**ಅಕ್ಷರ ವಿನ್ಯಾಸ ಮತ್ತು ಜೋಡಣೆ:** ಶ್ರೀಮತಿ ಸ್ವಾತಿ ಭಾಗವತ್

**ಬಿಡಿಸಂಚಿಕೆ** : ರೂ. 8.00 **ವಾರ್ಷಿಕಚಂದಾ** : ರೂ. 90.00
**15 ವರ್ಷಕ್ಕೆ** : ರೂ. 1,250.00 **ಸದಸ್ಯರು** : ರೂ. 2,250.00
**ಪೋಷಕರು : ರೂ.** 3,000.00

**ವಿದ್ವತ್ ಪ್ರಪಂಚ**



# ಶ್ರೀಮಧ್ವಮತದ ವೈಶಿಷ್ಟ್ಯಗಳು

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಜೀವೋತ್ತಮರಾದ ಶ್ರೀಮನ್ಮಧ್ವಾಚಾರ್ಯರು ಪ್ರಚುರಪಡಿಸಿರುವ ಶ್ರೀಮನ್ಮಧ್ವಮತವು ನೂರಾರು ವೈಶಿಷ್ಟ್ಯಗಳಿಂದ ಕೂಡಿದೆ. ಇವುಗಳಲ್ಲಿ ಹತ್ತು ವೈಶಿಷ್ಟ್ಯಗಳನ್ನು ಇಲ್ಲಿ ಉಲ್ಲೇಖಿಸಿರುವೆವು .

## 1) ಪರಿಷ್ಕೃತ ವಿಮರ್ಶೆ

ಶ್ರೀಮಧ್ವಮತದಲ್ಲಿ ಶಾಸ್ತ್ರಾರ್ಥವನ್ನು ಪರಿಷ್ಕೃತವಾಗಿ ವಿಮರ್ಶಿಸಲಾಗುವುದು.

**ಪ್ರತಿಸೂತ್ರಂ ಪ್ರಕಾಶ್ಯೇತೇ ಘಟನಾಘಟನೇ ಮಯಾ ।**
**ಸ್ವೀಯಾನ್ಯಪಕ್ಷಯೋಃ ಸಮ್ಯಕ್ ವಿದಾಂ ಕುರ್ವಂತು ಸೂರಯಃ ॥**

ಬ್ರಹ್ಮಸೂತ್ರದ ಪ್ರತಿಯೊಂದು ಸೂತ್ರಕ್ಕೂ ನಮ್ಮ ಮತದ ಸಾಂಗತ್ಯವನ್ನೂ, ಇತರ ಮತದ ಅಸಾಂಗತ್ಯವನ್ನೂ ಚೆನ್ನಾಗಿ ತೋರಿಸಲ್ಪಡುವುದು. ವಿದ್ವಾಂಸರು ಇದನ್ನು ಗಮನಿಸಲಿ ಎಂದು ಶ್ರೀವ್ಯಾಸತೀರ್ಥರು ಬ್ರಹ್ಮಸೂತ್ರವಾಙ್ಮಯದ ಬಗ್ಗೆ ರಚಿಸಿರುವ ತಾತ್ಪರ್ಯ ಚಂದ್ರಿಕಾ ಎಂಬ ವಿಮರ್ಶಾತ್ಮಕ ಕೃತಿಯಲ್ಲಿ ಹೇಳಿಕೊಂಡಿರುವುದಿದೆ. ಇದು ಬರೇ ವ್ಯಾಸತೀರ್ಥರ ಗ್ರಂಥವೈಶಿಷ್ಟ್ಯವನ್ನಷ್ಟೇ ಅಲ್ಲದೆ, ಶ್ರೀಮಧ್ವಮತದ ವಿಮರ್ಶೆಯ ಪದ್ಧತಿಗೇ ನಿದರ್ಶನವಾಗಿದೆ.

## 2) ಶಾಸ್ತ್ರಕ್ಕೆ ಶ್ರೇಷ್ಠತ್ವದ ಸಂಪಾದನೆ

ಅರ್ಥತಃ ಶ್ರೇಷ್ಠತೆಯು ಬಂದರಷ್ಟೇ ಶಾಸ್ತ್ರಕ್ಕೆ ಸ್ವರೂಪತಃ ಶ್ರೇಷ್ಠತೆಯು ಸಿದ್ಧಿಸುವುದು. ಅಂದರೆ ಶ್ರೇಷ್ಠವಾದ ಅರ್ಥವನ್ನೊಳಗೊಂಡಾಗಷ್ಟೇ ಶಾಸ್ತ್ರವು ಸರ್ವಶ್ರೇಷ್ಠ ಎಂದೆನಿಸಲು ಸಾಧ್ಯ. ವೈದಿಕ ಶಾಸ್ತ್ರಕ್ಕೆ ಅರ್ಥತಃ ಶ್ರೇಷ್ಠತೆಯನ್ನು ಸಂಪಾದಿಸಿ ಕೊಟ್ಟು, ಆ



ಮೂಲಕ ಅದು ಸರ್ವಶ್ರೇಷ್ಠ ಶಾಸ್ತ್ರ ಎಂದೆನಿಸುವಂತೆ ಸಮರ್ಥಿಸಿದ ಕೀರ್ತಿ ಮಧ್ವಮತಕ್ಕೆ ಸಲ್ಲಬೇಕು. ಶ್ರೀಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯನಿರ್ಣಯ ಎಂಬ ಗ್ರಂಥದಲ್ಲಿ ಮಹಾಭಾರತಕ್ಕೆ ಆಧ್ಯಾತ್ಮಿಕಾರ್ಥಗಳನ್ನು ತೋರಿಸಿ, **‘ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ’** ಇದೆ ರೀತಿಯಾಗಿ ಸಮಗ್ರ ಮಹಾಭಾರತಕ್ಕೂ ಆಧ್ಯಾತ್ಮಿಕಾರ್ಥವೂ ಇದೆ ಎಂದು ಸಾಧಿಸಿರುವುದರ ಮೂಲಕ ಬರೇ ಮಹಾಭಾರತಕ್ಕಷ್ಟೇ ಅಲ್ಲದೆ, ಸಕಲ ವೈದಿಕ ಪುರಾಣೇತಿಹಾಸಗಳೆಲ್ಲ ಅಧ್ಯಾತ್ಮಿಕಾರ್ಥವನ್ನೂ ಒಳಗೊಂಡಿವೆ ಎಂದು ಸೂಚಿಸಿಕೊಟ್ಟಿರುವರು. ಮಹಾಭಾರತಾದಿಗಳು ಬರೇ ಇತಿಹಾಸಕ್ಕೆ ಸಂಬಂಧಿಸಿದ ಅರ್ಥವನ್ನಷ್ಟೇ ಒಳಗೊಂಡಿದ್ದಲ್ಲಿ ಅವುಗಳಿಗೆ ಸರ್ವಕಾಲ ಸರ್ವದೇಶಗಳಲ್ಲಿ ಗ್ರಾಹ್ಯತೆಯು ಸಿದ್ಧಿಸದು. ಆಧ್ಯಾತ್ಮಿಕಾರ್ಥಗಳಾದರೂ ಸರ್ವದೇಶಕಾಲದ ಸರ್ವರಿಗೂ ಸಂಬಂಧಿಸಿರುವುದರಿಂದ ಅಂತಹ ಅರ್ಥವನ್ನೊಳಗೊಂಡ ಮಹಾಭಾರತಾದಿಗಳಿಗೆ ಸರ್ವಮಾನ್ಯತೆ ಬರುವಂತಾಗಿದೆ.

ಹೀಗೆಯೇ **ತ್ರಯೋರ್ಥಾಃ ಸರ್ವವೇದೇಷು......** ಸಮಗ್ರವೇದವು ಅಧ್ಯಾತ್ಮಿಕಾದಿ ಮೂರು ಮೂರು ಅರ್ಥಗಳನ್ನೊಳಗೊಂಡಿದೆ ಎಂದು ಶ್ರೀಮದಾಚಾರ್ಯರು ಋಗ್ವೇದದ ನಲ್ವತ್ತು ಸೂಕ್ತಗಳಿಗೆ ಭಾಷ್ಯ ರಚಿಸಿ ತೋರಿಸಿಕೊಟ್ಟಿರುವರು. ಪ್ರಕೃತಿಯ ಬೆಂಕಿ, ಗಾಳಿ ಮುಂತಾದ ವಸ್ತುಗಳ ಶಕ್ತಿಯನ್ನು ಕಂಡು ಬೆರಗಾದ ಋಷಿಗಳು ನಡೆಸಿರುವ ಅಗ್ನಿಸ್ತುತಿ, ವಾಯುಸ್ತುತಿ ಮುಂತಾದುವುಗಳನ್ನೊಳಗೊಂಡದ್ದೇ ವೇದ ಎಂಬ ಬಾಲಿಶವಾದ ವಾದವನ್ನು ಸಮರ್ಥವಾಗಿ ನಿರಾಕರಿಸಿ ವೇದಶಾಸ್ತ್ರದಲ್ಲಿ ಅಡಗಿರುವ ಭಗವತ್ಪರವಾದ ಅರ್ಥಸಂಪತ್ತನ್ನು ತೆರೆದು ತೋರಿಸಿರುವ ಕೀರ್ತಿ ಶ್ರೀಮಧ್ವರಿಗೆ ಸಲ್ಲಬೇಕು.

ಈ ರೀತಿಯಾಗಿ ವೈದಿಕವಾಙ್ಮಯದ ಪುರಾಣೇತಿಹಾಸ ಸಾಹಿತ್ಯಕ್ಕೂ, ವೇದಸಾಹಿತ್ಯಕ್ಕೂ ಅರ್ಥಗಾಂಭೀರ್ಯವನ್ನು ಪ್ರಕಟಪಡಿಸಿ, ಆ ಮೂಲಕ ವೈದಿಕಶಾಸ್ತ್ರ ಸರ್ವಶ್ರೇಷ್ಠ ಎನಿಸುವಂತೆ ಮಾಡಿದುದು ಶ್ರೀಮಧ್ವಮತ.

## 3) ಭಕ್ತಿಗೆ ಶ್ರೇಷ್ಠ ಸ್ಥಾನಮಾನ

ಸಾಧನಗಳೆಲ್ಲೆಲ್ಲ ಭಕ್ತಿಗೆ ಶ್ರೇಷ್ಠವಾದ ಸ್ಥಾನಮಾನ ದೊರಕುವಂತೆ ಮಾಡಿದುದು ಮಧ್ವಮತದ ಮತ್ತೊಂದು ವೈಶಿಷ್ಟ್ಯ. ಶಂಕರಾಚಾರ್ಯರೂ **ಮೋಕ್ಷಸಾಧನಸಾಮಗ್ರ್ಯಾಂ**

(18ನೇ ಪುಟದಲ್ಲಿ...)
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಸ್ಕಾಂದ ಪುರಾಣಾಂತರ್ಗತ

# ರಜತಪೀಠ ಮಹಾತ್ಮೆ

**ಶೌನಕಉವಾಚ**

**ಸೂತ ಶ್ರೀಕೃಷ್ಣಯಾತ್ರಾಯಾಂ ಕೋ ವಿಧಿಸ್ಸಂಪ್ರಕೀರ್ತಿತಃ ।**
**ನಿಯಮಾಃ ಕೇತ್ರ ಕರ್ತವ್ಯಾ ವರ್ಜನಿಯಾ ಚ ಕಾ ವಿಧಿಃ ॥೧॥**

ಎಲೈ ಸೂತಪುರಾಣಿಕನೇ, ಶ್ರೀಕೃಷ್ಣಮೂರ್ತಿಯ ಯಾತ್ರೆಗೈಯುವುದರಲ್ಲಿ ಯಾವ ವಿಧಾನವು ಹೇಳಲ್ಪಟ್ಟಿದೆ? ಯಾತ್ರೆಯ ನಿಯಮಗಳೇನು? ಏನನ್ನು ಬಿಡಬೇಕು?

**ಕಿಂ ಕರ್ತವ್ಯಂ ಸ್ಥಲೇ ಚಾಽಸ್ಮಿನ್ ತೀರ್ಥಯಾತ್ರಾಪರಾಯಣೈಃ ।**
**ದಾನಾನಿ ಕಾನಿ ಶಸ್ತಾನಿ ತೀರ್ಥಾನಿ ಕತಿ ಸಂತಿ ವೈ ॥೨॥**
**ಏತತ್ಸರ್ವಂ ಸವಿಸ್ತಾರಂ ವದ ಸೂತ ವಿದಾಂವರ ।**

ತೀರ್ಥಯಾತ್ರೆಯಲ್ಲಿ ಆಸಕ್ತರಾದವರಿಂದ ಈ ಸ್ಥಳದಲ್ಲಿ ಮಾಡಲ್ಪಡತಕ್ಕದ್ದೇನು? ಪ್ರಶಸ್ತವಾದ ದಾನಗಳು ಯಾವುದು? ಎಷ್ಟು ತೀರ್ಥಗಳಿರುವವು? ಬಲ್ಲವರಲ್ಲಿ ಶ್ರೇಷ್ಠನಾದ ಸೂತನೇ, ಇವೆಲ್ಲವನ್ನು ವಿಸ್ತಾರವಾಗಿ ತಿಳಿಸುವವನಾಗು.

**ಸೂತಃ**

**ಗೋಪೀಚಂದನಖಂಡಂ ಚ ಯೋ ದದಾತಿ ದ್ವಿಜಾತಯೇ ॥೩॥**
**ಕುಲಮೇಕಶತಂ ತತ್ರ ಭವಿರಾಪಾವಿತಂ ತದಾ ।**
**ಸರ್ವೇಷಾಮೇವ ಧರ್ಮಾಣಾಂ ಸ್ನಾನಮಾದ್ಯಂ ವಿದುರ್ಬುಧಾಃ ॥೪॥**

ಯಾವ ಪುರುಷನು ಈ ಕ್ಷೇತ್ರದಲ್ಲಿ ಗೋಪೀಚಂದನ ಖಂಡವನ್ನು ಬ್ರಾಹ್ಮಣನಿಗೆ ದಾನಗೈಯ್ಯುವನೋ, ಅವನ ವಂಶಕ್ಕೆಲ್ಲ ಒಳಪಟ್ಟ ನೂರೊಂದು ಕುಲವು ಪರಿಶುದ್ಧವಾಗುತ್ತದೆ. ಬಲ್ಲವರೆಲ್ಲರು ಸಮಸ್ತವಾದ ಧರ್ಮಗಳೊಳಗೆ ಸ್ನಾನವೇ ಮುಖ್ಯವಾದ ಧರ್ಮವೆಂದು ತಿಳಿಯುವರು.

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು



**ತಸ್ಮಾತ್ಕಾರ್ಯಂ ಪ್ರಥಮತೋ ಸ್ನಾನಂ ಕೃಷ್ಣಸ್ಯ ಸನ್ನಿಧೌ ।**
**ಗೋಪೀಚಂದನಖಂಡಸ್ಯ ದಾನಂ ತತ್ರ ಪ್ರಶಸ್ಯತೇ ॥೫॥**

ಆದ್ದರಿಂದ ಶ್ರೀಕೃಷ್ಣನ ಸನ್ನಿಧಿಯಲ್ಲಿ ಮೊದಲು ಸ್ನಾನವನ್ನು ಮಾಡಿ ಬಳಿಕ ಗೋಪೀಚಂದನದ ತುಂಡನ್ನು ದಾನಮಾಡುವುದು ಪ್ರಶಸ್ತವಾದದ್ದು.

**ಗೋಭೂತಿಲಹಿರಣ್ಯಾನಾಂ ಅನ್ನದಾನಾದಿನಾಮಪಿ ।**
**ದೀಪಪ್ರಜ್ವಲನಂ ತತ್ರ ಕರ್ತವ್ಯಂ ಕೃಷ್ಣಸನ್ನಿಧೌ ॥ ೬ ॥**

ಶ್ರೀಕೃಷ್ಣಮೂರ್ತಿಯ ಸನ್ನಿಧಿಯಲ್ಲಿ ಗೋದಾನವನ್ನೂ, ಭೂದಾನವನ್ನೂ, ತಿಲದಾನವನ್ನೂ, ಸುವರ್ಣದಾನವನ್ನೂ ಅನ್ನದಾನಾದಿಗಳನ್ನು, ದೀಪಾರಾಧನೆಯನ್ನೂ ಸಹಾ ಮಾಡಬೇಕು.

**ತೇನ ಪುಣ್ಯಪ್ರಭಾವೇನ ಮಾನವಾಃ ಕುಲದೀಪಕಾಃ ।**
**ಪುತ್ರಾನ್ ಪೌತ್ರಾಂಶ್ಚ ಲಬ್ಧ್ವಾಂತೇ ಗಮಿಷ್ಯಂತಿ ಹರೇಃಪರಮ್ ॥೭॥**

ಆ ರೀತಿ ಮಾಡಿದರೆ ಆ ಪುಣ್ಯದ ಪ್ರಭಾವದಿಂದ ಮನುಷ್ಯರು ತಮ್ಮ ಕುಲದಲ್ಲಿ ದೀಪಪ್ರಾಯರಾಗಿ ಪುತ್ರ ಪೌತ್ರಾಭಿವೃದ್ಧಿಯನ್ನೈದು ಕಡೆಗೆ ಶ್ರೀಹರಿಯ ಪಾದವನ್ನು ಸೇರುವರು.

**ಅಭಿಷೇಕಸ್ತದಾಕಾರ್ಯೋ ಬಾಲಗೋಪಾಲರೂಪಿಣಃ ।**
**ಕ್ಷೀರಾದಿಭಿರಭಿಪ್ರೀತೋ ಭವಿಷ್ಯತಿತತೋವಿಭುಃ ॥೮॥**

ಬಾಲಗೋಪಾಲರೂಪಿಯಾದ ಶ್ರೀಹರಿಗೆ ಕ್ಷೀರಾದಿಗಳಿಂದ ಅಭಿಷೇಕವ ಮಾಡಿಸಿದರೆ, ಅದರಿಂದ ವಿಭುವಾದ ಶ್ರೀಕೃಷ್ಣನು ಸುಪ್ರೀತನಾಗುವನು.

**ವಸ್ತ್ರಂಸುಸೂಕ್ಷ್ಮ ಕೌಶೇಯಂ ಕಾರ್ಪಾಸಮಥವಾವಿಭೋಃ ।**
**ಭೂಷಣಾನಿಚದಿವ್ಯಾನಿ ದದ್ಯಾದ್ಭಕ್ತಿ ಸಮನ್ವಿತಃ ॥೯॥**

ಭಕ್ತಿಯುಳ್ಳವನಾಗಿ ಸ್ವಾಮಿಯಾದ ಶ್ರೀಕೃಷ್ಣನಿಗೆ ಸೂಕ್ಷ್ಮವಾಗಿರುವ ಮೊಗಟವನ್ನಾಗಲೀ ಅಥವಾ ಕಾರ್ಪಸದಿಂದ ನಿರ್ಮಿತವಾದ ವಸ್ತ್ರವನ್ನಾಗಲೀ ಸರ್ವೋತ್ತಮವಾದ ಒಡಿವೆಗಳನ್ನಾಗಲಿ ಸಮರ್ಪಣವನ್ನುಗೈಯಬೇಕು.

ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

**ತನ್ಮಾಮವತು । ತದ್ ವಕ್ತಾರಮವತು ।**

'ತತ್' ಎಂಬುದು ಭಗವಂತನ ಒಂದು ರಹಸ್ಯನಾಮಧೇಯ.

ಓಂ, ತತ್, ಸತ್ ಎಂಬುವದು ರಹಸ್ಯ ಶಬ್ದಗಳು **'ಓಂ ತದ್ವನಂ ಇತ್ಯುಪಾಸಿತವ್ಯಮ್'** ಎಂದು ಉಪನಿಷತ್ತುಗಳು ಹೇಳಿವೆ.

ಗಾಯತ್ರಿ ಮಂತ್ರದ ಸಂಪೂರ್ಣ ಅರ್ಥ 'ತತ್' ಶಬ್ದದಲ್ಲಿ ಅಡಗಿದೆ. ಗಾಯತ್ರಿಯು 'ತ' ಶಬ್ದದಿಂದ ಪ್ರಾರಂಭಗೊಂಡು 'ತ್' ಶಬ್ದದಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದಲೇ 'ತತ್' ಎಂಬುದು ಗಾಯತ್ರೀ ವಾಚಕವಾದ ಶಬ್ದ.

'ಅವತು' ಎಂಬುದು ಅವಧಾತುವಿನಿಂದ ಬಂದದ್ದು. ಇದಕ್ಕೆ 18 ಅರ್ಥಗಳಿವೆ.

ಅದರ ಕೆಲವು ಅರ್ಥಗಳು ಹೀಗಿವೆ.

1) **ಅವತು –** ಅವ ರಕ್ಷಣೇ (ಅವನು ನನ್ನನ್ನು ರಕ್ಷಿಸಲಿ.)

ಭಗವಂತ ರಕ್ಷಿಸುವುದು ಎಂದರೆ ಹಟ್ಟಿಯಲ್ಲಿ ನಾವು ದನ ಸಾಕಿದ ಹಾಗೆ ಸಾಕಿ ನಮ್ಮನ್ನು ರಕ್ಷಿಸುವದಲ್ಲ. ಒಳ್ಳೆಯ ಜ್ಞಾನವನ್ನು ಕೊಡುವುದೇ ರಕ್ಷಿಸುವುದು ಎಂದು ಅರ್ಥ. ಜ್ಞಾನದಿಂದ ಮೋಕ್ಷ. ಇದೆ ರಕ್ಷಣೆ.

2) **ಅವತು–** ಅವ ಗತೌ ಎಂದರೆ ಬರಲಿ. ಅದು ನನ್ನ ಬಳಿ ಬರಲಿ. ಅವನು ನನ್ನತ್ತಿರಕ್ಕೆ ಬರಲಿ. ಅವನು ಯಾವಾಗಲು ನಮ್ಮ ಹತ್ತಿರವೇ ಇದ್ದಾನೆ. ಬರಲಿ ಎಂದರೆ ಅವನ ರಕ್ಷಣೆ ನಮಗೆ ಒದಗಿ ಬರಲಿ ಎಂದು ಅರ್ಥ.

3) **ಅವತು–** ಅವ ಕಾಂತೌ. ಅವನು ನನ್ನನ್ನು ಇಚ್ಛಿಸಲಿ. ಶ್ರೀ ಸೂಕ್ತದಲ್ಲಿ ಇದನ್ನೇ ಹೇಳುವ ಒಂದು ಮಂತ್ರ ಇದೆ. ನಾನು ಮಾತ್ರ ಭಜನೆ ಮಾಡುವುದೇನು? ನೀನು ಸಹ ನನ್ನನ್ನು ಭಜಿಸು ಎಂದು ಭಕ್ತ ಭಗವಂತನಿಗೆ ಹೇಳುತ್ತಾನೆ. ಭಜನೆ ಎಂದರೆ ಪ್ರೀತಿಯಿಂದ ನೋಡುವದು. ನಾನು ಮಾತ್ರ ನಿನ್ನನ್ನು ಪ್ರೀತಿಯಿಂದ ನೋಡುವುದಲ್ಲ. ನೀನು ಸಹ

ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.



ನನ್ನನ್ನು ಪ್ರೀತಿಯಿಂದ ನೋಡು. ನೀನು ನನ್ನನ್ನ ಪ್ರೀತಿಯಿಂದ ಬಯಸು. ಅದು ನನ್ನನ್ನು ಬಯಸಲಿ. ತತ್ ಮಾಂ ಅವತು

4) **ಅವತು–**ಅವ ತೃಪ್ತೌ. ನನ್ನ ಆರಾಧನೆಯಿಂದ ಅವನು ತೃಪ್ತಿ ಪಡಲಿ.

5) **ಅವತು–**ಅವ ಶ್ರವಣೇ. ನಾನು ಏನು ಮಾಡಿದೆ ಅದನ್ನ ನೀನು ನೆನಪಿಸಿಕೊ. ನಾನು ಮಾಡಿದ ಸ್ತುತಿಯನ್ನು ಅವನು ಕೇಳಲಿ. ಅಂದರೆ ಸ್ವೀಕರಿಸಲಿ.

6) **ಅವತು–** ಅವ ಪ್ರವೇಶೇ. ಅವನು ನನ್ನೊಳಗೆ ಪ್ರವೇಶಿಸಲಿ, ಅವನು ನನ್ನಲ್ಲಿ ಇರಲಿ.

7) **ಅವತು–**ಅವ ವ್ಯಾಪ್ತೌ. ಅವನು ಒಳಗೂ ಹೊರಗೂ ತುಂಬಲಿ. ತುಂಬಿಕೊಂಡು ಇದ್ದಾನಲ್ಲವೆ? ತುಂಬಿಕೊಂಡಿದ್ದಾನೆ ಎಂಬ ಎಚ್ಚರ ಬರಲಿ.

8) **ಅವತು–**ಅವ ಶೋಭಾಯಾಮ್.ನಾನು ಮಾಡಿದ ವೇಧಾನುಸಂಧಾನಕ್ಕೆ ಕಳೆ ತುಂಬಲಿ.

9) **ಅವತು–** ಅವ ಸತ್ತಾಯಾಮ್. ನನ್ನ ಬದುಕು ಶುಭವಾಗಲಿ.

10) **ಅವತು–**ಅವ ವೃದ್ಧೌ. ನನ್ನ ಸಾಧನೆ, ಜ್ಞಾನವನ್ನು ಪೂರ್ಣ ಮಾಡಲಿ. ವೃದ್ಧಿ ಹೊಂದುವಂತೆ ಮಾಡಲಿ.

11) **ಅವತು–**ಅವ ಸಾಮರ್ಥ್ಯೇ. ನನಗೆ ಸಾಮರ್ಥ್ಯವನ್ನು ಕೊಡಲಿ.

12) **ಅವತು–** ಅವ ಗಮೇ. ಜ್ಞಾನವನ್ನು ಕೊಡಲಿ.

13) **ಅವತು–** ಅವ ಗೃಹೇ. ಅನುಗ್ರಹ ಮಾಡಿ ಸ್ವೀಕರಿಸಲಿ.

ಇಷ್ಟೆಲ್ಲ ಹೇಳಿದ ನಂತರವೂ ಅವನಿಗೆ ಸಾಲದು ಎಂದು ಕಂಡಿತು. ಆದ್ದರಿಂದ ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ಓಂಕಾರವನ್ನು ಉಚ್ಚರಿಸಿದ.

'ಓಂ' ಕಾರವು ಗಾಯತ್ರಿಯ ಮೂರು ಪಾದವನ್ನು, ಪುರುಷಸೂಕ್ತದ ಮೂರು ವರ್ಗಗಳು ಇಡೀ ಋಗ್ವೇದ, ಯಜುರ್ವೆದ, ಸಾಮವೇದಗಳ ಸಾರವನ್ನು ಹೇಳುವುದರಿಂದ 'ಓಂ' ಕಾರ ಇಡೀ ವೈದಿಕ ಸಾಹಿತ್ಯದ ಅರ್ಥವನ್ನು ಒಳಗೊಂಡಿದೆ. ಓಂ ಎಂಬುದು ಎಲ್ಲದರ ವಾಚಕ. ಸಮಸ್ತ ವೇದಾಂತದ ಸಂಗ್ರಹ ಇದರಲ್ಲಿ ಬಂದಿದೆ. ಈ ಶಾಂತಿ ಮಂತ್ರದಲ್ಲಿಯೂ ಅದು ತುಂಬಿದೆ.

ಓಂಕಾರದ ಮೂರು ಅಕ್ಷರಗಳು ವಿಶ್ವ, ತೈಜಸ, ಪ್ರಾಜ್ಞನನ್ನು ಹೇಳುತ್ತವೆ. ಇದರ ಅರ್ಥ ವ್ಯಾಪ್ತಿಯೇ ಗಾಯತ್ರಿಯ ಮೂರು ಪಾದಗಳಲ್ಲಿ ಹೇಳಿದೆ. ಅಲ್ಲದೆ ಓಂಕಾರದ ನಾದದಿಂದ ತುರ್ಯನನ್ನು ಹೇಳುತ್ತಾರೆ.

(ಮುಂದುವರಿಯುವುದು)

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

# ಅಪೂರ್ವ ಪ್ರಶ್ನೋತ್ತರ ಮಾಲಿಕಾ

(ಮಹಾಭಾರತದ ಅನುಶಾಸನ ಪರ್ವದ ಉಮಾಮಹೇಶ್ವರ ಸಂವಾದದ ಸಾರ)

## ತೀರ್ಥಗಳು ಯಾವುವು?

**ಪ್ರಶ್ನೆ:–** ಅನೇಕ ಧಾರ್ಮಿಕರು ತೀರ್ಥಯಾತ್ರೆಯನ್ನು ಕೈಗೊಳ್ಳುತ್ತಾರೆ. ಪುಣ್ಯ ಸಂಪಾದಿಸಬೇಕು. ಪಾಪ ಕಳೆದುಕೊಳ್ಳಬೇಕೆಂಬುದೇ ಅವರೆಲ್ಲರ ಉದ್ದೇಶ. ಆದರೆ ತೀರ್ಥ ಎಂದರೆ ಯಾವುದೆಂಬುದೇ ಗೊತ್ತಿಲ್ಲ. ಎಲ್ಲ ಜಲವೂ ಯಾಕೆ ತೀರ್ಥವಲ್ಲ. ಎಲ್ಲ ಸ್ಥಳವೂ ಏಕೆ ತೀರ್ಥಕ್ಷೇತ್ರವಲ್ಲ? ತೀರ್ಥಕ್ಷೇತ್ರ ಸ್ನಾನದ ವಿಧಾನಗಳೇನು?

**ಉತ್ತರ:– ಯಾಸ್ತು ಲೋಕೇ ಮಹಾನದ್ಯಾಸ್ತಾಃ ಸರ್ವಾಸ್ತೀರ್ಥ ಸಂಜ್ಞಿಕಾಃ ।**
**ತಾಸಾಂ ಪ್ರಾಕ್ ಸ್ರೋತಸಃ ಶ್ರೇಷ್ಠಾಃ ಸಂಗಮಶ್ಚ ಪರಸ್ಪರಮ್ ॥**

ಲೋಕದಲ್ಲಿ ಇರುವ ಮಹಾನದಿಗಳೆಲ್ಲ ತೀರ್ಥಗಳೆಂದು ಕರೆಯಲ್ಪಡುತ್ತದೆ. ಅವುಗಳಲ್ಲಿ ಪೂರ್ವದಿಕ್ಕಿನ ಕಡೆಗೆ ಹರಿಯುವ ನದಿಗಳು ಶ್ರೇಷ್ಠವಾಗಿವೆ. ಎರಡು ನದಿಗಳು ಕೂಡುವ ಸ್ಥಳವೂ ತೀರ್ಥವೆಂದು ಕರೆಯಲ್ಪಡುತ್ತವೆ.

**ತಾಸಾಂ ಸಾಗರ ಸಂಯೋಗೋ ವರಿಷ್ಠಶ್ಚೇತಿ ವಿದ್ಯತೇ ।**
**ತಾಸಾ ಮುಭಯತಃ ಕೂಲಂ ತತ್ರ ತತ್ರ ಮನೀಷಿಭಿಃ ॥**
**ದೇವೈರ್ವಾ ಸೇವಿತಂ ದೇವಿ ತತ್ ತೀರ್ಥಂ ಪರಮಂ ಸ್ಮೃತಮ್ ॥**

ಅವುಗಳಲ್ಲಿ ನದಿಗಳು ಸಾಗರವನ್ನು ಸೇರುವ ಸ್ಥಳ ಶ್ರೇಷ್ಠವಾದದ್ದೆಂದು ತಿಳಿಯಲ್ಪಡುತ್ತದೆ. ಇಂತಹ ನದಿಗಳ ಆಚೆ ಈಚೆಯ ದಡಗಳಲ್ಲಿ ಎಲ್ಲೆಲ್ಲಿ ಜ್ಞಾನಿಗಳು, ದೇವತೆಗಳು ಸಾಧನೆಯನ್ನು ನಡೆಸಿದ್ದಾರೋ ಅಂತಹ ಸ್ಥಳ ಶ್ರೇಷ್ಠವಾದ ತೀರ್ಥವೆಂದು ವರ್ಣಿಸಲ್ಪಟಿದೆ.

**ಸಮುದ್ರಶ್ಚ ಮಹಾತೀರ್ಥಂ ಪಾವನಂ ಪರಮಂ ಸ್ಮೃತಮ್ ।**
**ತಸ್ಯ ಕೂಲಗತಾಸ್ತೀರ್ಥಾ ಮಹಾದ್ಭಿಶ್ಚ ಸಮಾಪ್ಲುತಾಃ ।**

**ಪ್ರತಿದಿನ ಆತನನ್ನು ಪೂಜಿಸಬೇಕು**



ಸಮುದ್ರವು ಪರಮಪಾವನವಾದ ಮಹಾತೀರ್ಥವೆಂದು ವರ್ಣಿಸಲ್ಪಟ್ಟಿದೆ. ಅದರ ದಡದಲ್ಲಿರುವ ತೀರ್ಥಗಳಲ್ಲಿ ಮಹಾಜ್ಞಾನಿಗಳು ಅವಗಾಹನಸ್ನಾನವನ್ನು ನಡೆಸಿದ್ದಾರೆ.

**ಸ್ರೋತಸಾಂ ಪರ್ವತಾನಾಂ ಚ ಜೋಷಿತಾನಾಂ ಮಹರ್ಷಿಭಿಃ ।**
**ಅಪಿ ಕೂಲಂ ತಟಾಕಂ ವಾ ಸೇವಿತಂ ಮುನಿಭಿಃ ಪ್ರಿಯೇ ॥**
**ತತ್ ತು ತೀರ್ಥಮಿತಿ ಜ್ಞೇಯಂ ಪ್ರಭಾವಾತ್ ತು ತಪಸ್ವಿನಾಮ್ ॥**

ಮಹರ್ಷಿಗಳಿಂದ ಸೇವಿಸಲ್ಪಟ್ಟ ನೀರಿನ ಧಾರೆಗಳ ಪರ್ವತಗಳು ತೀರ ಪ್ರದೇಶ ಮುನಿಗಳಿಂದ ಸೇವಿಸಲ್ಪಡುವ ಸರೋವರಗಳೂ ಆ ತಪಸ್ವಿಗಳ ಪ್ರಭಾವದಿಂದ ತೀರ್ಥವೆಂದು ಕರೆಸಲ್ಪಡುತ್ತದೆ.

ಋಷಿಮುನಿಗಳು ವಾಸಿಸುವ ಸ್ಥಳಗಳು ಜಗತ್ತಿನ ಕಲ್ಯಾಣದ ದೃಷ್ಟಿಯಿಂದ ತೀರ್ಥವೆಂದು ಕರೆಸಲ್ಪಡುತ್ತವೆ.

ಇಂತಹ ಸ್ಥಳಗಳನ್ನು ಸೇವಿಸುವುದೇ ತೀರ್ಥಯಾತ್ರೆ. ಯಾವುದನ್ನು ಸೇವಿಸುವುದರಿಂದ ನಮ್ಮನ್ನು ಸಂಸಾರವನ್ನು ದಾಟಿಸುತ್ತದೆಯೋ ಅದೇ ತೀರ್ಥ. ಯಾವುದು ನಮ್ಮನ್ನು ಪವಿತ್ರಗೊಳಿಸುತ್ತದೆಯೋ ಅದು ತೀರ್ಥ.

ಕೇವಲ ಋಷಿ–ಮುನಿಗಳು ಸೇವಿಸಿದ ನೀರು–ನೆಲಕ್ಕೆ ಮಾತ್ರ ಈ ಸಾಮರ್ಥ್ಯ. ಆದ್ದರಿಂದ ಅದೇ ನಿಜವಾದ ತೀರ್ಥ.

ಆ ಸ್ಥಳಗಳಲ್ಲಿ ಋಷಿ–ಮುನಿಗಳು ಬಹಳ ಕಾಲದವರೆಗೆ ನೆಲೆಸಿ ಧ್ಯಾನದಿಂದ ಭಗವಂತನಲ್ಲಿ ಒಲಿಸಿಕೊಂಡರು. ಅವರ ಭಕ್ತಿಗೆ ಮೆಚ್ಚಿದ ಭಗವಂತ ಆ ಜಲ–ನೆಲದಲ್ಲಿ ಸದಾ ನೆಲೆಸಿದ. ಅದೇ ಪುಣ್ಯತೀರ್ಥವಾಯಿತು. ಇಂತಹ ಪುಣ್ಯತೀರ್ಥದಲ್ಲಿ ಮಿಂದು ಮಡಿಮಾಡಿಕೊಂಡು ಸಮೀಪದ ಪುಣ್ಯ ಸ್ಥಳದಲ್ಲಿ ಕುಳಿತು ಮನದಲ್ಲಿ ಶ್ರೀಹರಿಯನ್ನು ನೆಲೆಗೊಳಿಸಿ ಚಿಂತಿಸುವುದೇ ನಿಜವಾದ ತೀರ್ಥಯಾತ್ರೆ. ಇದು ಮಲಗಿಕೊಂಡು ಮೂವತ್ತು ದಿನಗಳಲ್ಲಿ ನಲ್ವತ್ತು ಕ್ಷೇತ್ರಗಳಿಗೆ ಭೇಟಿಕೊಡುವುದರಿಂದ ಖಂಡಿತ ಸಾಧ್ಯವಾಗದು. ಸಜ್ಜನರ, ಜ್ಞಾನಿಗಳೊಡಗೂಡಿ ಶುದ್ಧವಾದ ರೀತಿಯಿಂದ, ಇಂದ್ರಿಯನಿಗ್ರಹದಿಂದ ಕೂಡಿ, ಪವಿತ್ರವಾದ, ಮಾಲಿನ್ಯರಹಿತವಾದ ತೀರ್ಥಕ್ಷೇತ್ರದಲ್ಲಿ ಹಲವು ದಿನ ಸ್ನಾನ–ಧ್ಯಾನ–ಪಾನ–ಚಿಂತನ ನಡೆಸುವುದರಿಂದ ಮಾತ್ರ ಸಾಧ್ಯ. ತೀರ್ಥಯಾತ್ರೆಗೆ ಧನಮುಖ್ಯವಲ್ಲ. ಮನ ಮುಖ್ಯ.

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.**

# ಶ್ರೀಮಧ್ವರ ಮಾದರಿಯಾದ ಮುಕುಂದನ ಪೂಜೆ

-ಅನಂತಕೃಷ್ಣಾಚಾರ್ಯ,ಉಡುಪಿ

ಪೂರ್ಣಪ್ರಜ್ಞರು ಸರೋವರದಲ್ಲಿ ಮಿಂದು ಮಡಿಯಾಗಿ ಊರ್ಧ್ವಪುಂಡ್ರಗಳನ್ನು ಧರಿಸಿ ನಡೆದು ಬಂದರು. ಆಚಾರ್ಯರ ಪೂರ್ಣಚಂದ್ರನಂತಿರುವ ಮುಖಕಮಲವನ್ನು ನೋಡುತ್ತ ಕೈಮುಗಿದು ನಿಂತ ಜನ ಸಂದಣಿ ಶಿಷ್ಯರು 'ದಾರಿ ಬಿಡಿ' ಎನ್ನುವುದಕ್ಕಿಂತ ಮುಂಚಿತವಾಗಿಯೇ ಪಕ್ಕಕ್ಕೆ ಸರಿದು ನಿಂತಿತು. ಆಚಾರ್ಯರು ಪೂಜಾ ಮಂದಿರವನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಕಾಲುತೊಳೆದರು. ಆ ಪಾವನವಾದ ಪಾದಜಲವನ್ನು ತಾ ಮುಂದು ತಾ ಮುಂದು ಎಂಬಂತೆ ಜನಸಂದಣಿ ಮುಗಿಬಿದ್ದು ತಲೆಯಲ್ಲಿ ಧರಿಸಿತು. ಕಡೆಗೆ ಭೂಮಿಗೆ ಹೀರಲು ಒಂದು ಹನಿಯನ್ನೂ ಬಿಡಲಿಲ್ಲ. ಇದು ಭೂದೇವಿಗೆ ಇಷ್ಟವಲ್ಲ. ಆದರೂ ಸಹಿಸಿಕೊಂಡಳಂತೆ. ಆದ್ದರಿಂದಲೇ ಅವಳನ್ನು ಕ್ಷಮಾ ಎಂದು ಕರೆಯುವುದು.

ಆಚಾರ್ಯರು ಪೂಜೆಗೆ ಕುಳಿತರು. ಅದಕ್ಕಾಗಿ ಯತಿಶಿಷ್ಯರೊಬ್ಬರು ಮೊದಲೇ

> ರುದ್ರದೇವ ಹೆಚ್ಚಿನ ವ್ಯಕ್ತಿಗಳಿಗೆ ವರವನ್ನು ನೀಡಿದ್ದಿರಬಹುದು. ಆದರೆ ರುದ್ರದೇವ ಸ್ವತಂತ್ರವಾಗಿ ವರವನ್ನು ಕೊಡಲು ಸಮರ್ಥರಲ್ಲ. ಶ್ರೀವಿಷ್ಣು ರುದ್ರನ ಅಂತರ್ಯಾಮಿಯಾಗಿ ವರದಾನದ ಸಾಮರ್ಥ್ಯವನ್ನು ಪ್ರೇರೇಪಿಸಿದಾಗ ರುದ್ರ ವರಪ್ರದನಾಗಬಲ್ಲ.
>
> ಒಂದೆಡೆ ಅನ್ನಸಂತರ್ಪಣೆ ನಡೆದಾಗ ನೂರಾರು ಮಂದಿ ಬಡಿಸುವವರು ಇರುತ್ತಾರೆ. ಅವರು ದೊಡ್ಡ ಪ್ರಮಾಣದಲ್ಲಿ ಅನ್ನಾದಿಗಳವಿತರಣೆಯನ್ನು ನಡೆಸುವರು. ಆದರೆ ಅಷ್ಟು ಮಾತ್ರಕ್ಕೆ ಅವರು 'ಅನ್ನದಾತಾ' ಎನಿಸುವುದಿಲ್ಲ. ಆ ಅನ್ನಸಂತರ್ಪಣೆಯನ್ನು ಸ್ವತಂತ್ರವಾಗಿ ನಡೆಸಿದ ಯಜಮಾನನಷ್ಟೇ 'ಅನ್ನದಾತ' ಎನಿಸುವನು.
>
> ಅದರಂತೆ ಸ್ವತಂತ್ರವಾಗಿ ವರಗಳನ್ನು ನೀಡುವ ಶ್ರೀವಿಷ್ಣುವೇ ಮುಖ್ಯವಾಗಿ 'ವರಪ್ರದ'. -ಶ್ರೀ ವಿದ್ಯಾಮಾನ್ಯತೀರ್ಥರು.

ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.



ಕಲಶದಲ್ಲಿ ರುಚಿನೋಡದ, ತಿಳಿಯಾದ, ತಂಪಾದ, ಯಾವ ವಾಸನೆಯೂ ಇರದ, ಉಗುರು, ಉಸಿರು ತಾಕದಂತೆ ಜಾಗ್ರತೆಯಲ್ಲಿ ಶ್ರೇಷ್ಠವಾದ ಜಲವನ್ನು ಸಂಗ್ರಹಿಸಿದ್ದರು. ಆಚಾರ್ಯರು ಕಲಶಪೂಜೆ ಮುಂತಾದುವುಗಳನ್ನು ಪೂರೈಸಿ ಬಳಿಕ ತಿಳಿಯಾದ ಶ್ರೀಗಂಧದ ನೀರ ಹನಿಗಳಿಂದ ಭಗವಂತನ ಪ್ರತೀಕಗಳನ್ನು ಮೀಯಿಸಿದರು. ಹೊಸ ಚಿಗುರು ತುಳಸಿಮಂಜರಿಗಳನ್ನು ಭಗವಂತನ ಮೇಲೇರಿಸಿ ನಾನಾ ಬಗೆಯ ಪುಷ್ಪಗಳಿಂದ ಅಲಂಕರಿಸಿ ವೈಭವದ ಷೋಡಶೋಪಚಾರಗಳಿಂದ ಶ್ರೀಹರಿಯನ್ನು ಪೂಜಿಸಿದರು. ಅನೂಪಚಾರಗಳನ್ನು ಅರ್ಪಿಸಿದರು. ಪೂಜೆಯಲ್ಲಿ ಸಂಭವಿಸಬಹುದಾದ ಮೂವತ್ತೆರಡು ಅಪರಾಧಗಳನ್ನು ತಡೆದರು.

ಭಗವಂತನಿಗೆ ಅರ್ಪಿಸುವ ಷೋಡಷೋಪಚಾರಗಳು (16 ಉಪಚಾರಗಳು) ಹೀಗಿವೆ. 1) ಅರ್ಘ್ಯ, 2) ಪಾದ್ಯ, 3) ಆಚಮನ, 4) ಮಧುಪರ್ಕ, 5) ಪುನರಾಚಮನ, 6) ಸ್ನಾನ, 7) ವಸ್ತ್ರ , 8) ವಿಭೂಷಣ, 9) ಉಪವೀತ, 10) ಆಸನ, 11) ಗಂಧ, 12) ಪುಷ್ಪ , 13) ಧೂಪ, 14) ದೀಪ, 15) ನೈವೇದ್ಯ, 16) ನಮಸ್ಕಾರ.

ಆರು ಅನೂಪಚಾರಗಳು ಹೀಗಿವೆ. ಮುಖವಾಸ, ತಾಂಬೂಲ, ದರ್ಪಣ, ಛತ್ರ, ಚಾಮರ, ಪಾದುಕೆ

ಪೂಜೆಯಲ್ಲಿ ಸಂಭವಿಸಬಹುದಾದ ಮೂವತ್ತೆರಡು ಅಪರಾಧಗಳು ಹೀಗಿವೆ.

1. ಉಂಡು-ತಿಂದು ಬಳಿಕ ದೇವರನ್ನು ಪೂಜಿಸುವುದು.
2. ಹಲ್ಲುಜ್ಜದೇ ದೇವರ ಮಂದಿರವನ್ನು ಪ್ರವೇಶಿಸುವುದು
3. ಸ್ತ್ರೀಸಂಗ ಮಾಡಿ ಬಳಿಕ ಸ್ನಾನ ಮಾಡದೆ ಪೂಜಿಸುವುದು
4. ಹೆಣವನ್ನು ಕಂಡು ಮೀಯದೇ ಪೂಜಿಸುವುದು
5. ಪೂಜೆಯ ನಡುವೆ ಮೂತ್ರ ವಿಸರ್ಜನೆ
6. ಹಾಗೆಯೆ ಮಲವಿಸರ್ಜನೆ
7. ಪೂಜೆಯ ನಡುವೆ ಅಳುತ್ತಾ ಮಾತನಾಡುವುದು
8. ಕಪ್ಪು (ಕೊಳಕು) ಬಟ್ಟೆ ಉಟ್ಟು ಪೂಜಿಸುವುದು
9. ಯಾವತ್ತೂ ರಾಜನ ಮನೆಯ ಅನ್ನವನ್ನುಂಡು ಪೂಜಿಸುವುದು
10. ರಜಸ್ವಲೆಯರೇ ಮುಂತಾದ ಮೈಲಿಗೆಯವರನ್ನು ಮುಟ್ಟಿ ಮಂದಿರವನ್ನು ಪ್ರವೇಶಿಸುವುದು

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

11. ಪೂಜೆಯ ನಡುವೆ ಸಿಟ್ಟಿಗೇಳುವುದು
12. ನಿಷಿದ್ಧವಾದ ಪುಷ್ಪಗಳಿಂದ ದೇವರನ್ನು ಪೂಜಿಸುವುದು.
13. ಕೆಂಪುಬಟ್ಟೆ, ಕೌಪೀನವನ್ನು ಧರಿಸುವುದು.
14. ಕಪ್ಪು ಬಟ್ಟೆಯನ್ನು ಪೂಜೆಗಾಗಿ ಬಳಸುವುದು
15. ದೀಪಹಚ್ಚದೆ ಕತ್ತಲಿನಲ್ಲಿ ಪ್ರತಿಮೆಗಳನ್ನು ಮುಟ್ಟುವುದು
16. ಶಾಸ್ತ್ರೋಕ್ತವಾದ ಪೂಜಾ ವಿಧಾನವನ್ನು ತೊರೆದು ಮನ ಬಂದಂತೆ ಪೂಜಿಸುವುದು
17. ದೇವರ ಮುಂದೆ ಚಾಮರ-ಬೀಸಣಿಗೆಯಂತೆ ಕಪ್ಪುವಸ್ತ್ರವನ್ನು ಉಪಯೋಗಿಸುವುದು.
18. ನಾಯಿಯನ್ನು ಮುಟ್ಟಿ ಗುಡಿಯನ್ನು ಪ್ರವೇಶಿಸುವುದು
19. ಹಂದಿಯ ಮಾಂಸವನ್ನು ತಿನ್ನುವುದು
20. ಕೋಳಿ ಮುಂತಾದ ಪಕ್ಷಿಗಳ ಮಾಂಸ ಸೇವನೆ
21. ಕೆಸರಿನಿಂದ ಕೂಡಿದ ಕಾಲಲ್ಲಿ ಗುಡಿಯನ್ನು ಪ್ರವೇಶಿಸುವುದು
22. ಚಿತೆಯನ್ನು ಮುಟ್ಟಿ ಗುಡಿಯೊಳಗೆ ಪ್ರವೇಶಿಸುವುದು
23. ಬೆಳ್ಳುಳ್ಳಿ ಮುಂತಾದ ಘಾಟಿನ ಪದಾರ್ಥವನ್ನು ಸೇವಿಸಿ ದೇವರ ಬಳಿ ಬರುವುದು
24. ಹಂದಿಯ ಮಾಂಸವನ್ನು ದೇವರಿಗೆ ಅರ್ಪಿಸುವುದು
25. ಮದ್ಯಪಾನ ಮಾಡಿ ದೇವ ಮಂದಿರವನ್ನು ಪ್ರವೇಶಿಸುವುದು
26. ಕುಸುಬೆ ಎಲೆಯನ್ನು ತಿನ್ನುವುದು.
27. ಪರರ ಬಟ್ಟೆಯನ್ನುಟ್ಟು ಪೂಜಿಸುವುದು
28. ಕನ್ನಡಿ-ಕಾಡಿಗೆ ಮುಂತಾದ ಉಪಚಾರಗಳಿಲ್ಲದ ಪೂಜೆ.
29. ಹೂವಿನಿಂದ ಅಲಂಕರಿಸದೆ ಧೂಪ-ದೀಪವನ್ನರ್ಪಿಸುವುದು
30. ಚಪ್ಪಲಿ ತೊಟ್ಟು ದೇವರಮೂರ್ತಿಯನ್ನು ಹೊರುವುದು
31. ದೇವ ಮಂದಿರವನ್ನು ಹೊಕ್ಕು ಗಂಟೆ-ನಗಾರಿಗಳನ್ನು ಬಾರಿಸದೆ ಸುಮ್ಮನಿರುವುದು.
32. ತಿಂದದ್ದು ಕರಗದೆ ಪೂಜಿಸುವುದು.

ಆಚಾರ್ಯರ ದೇವಪೂಜೆ ಈ ಮೂವತ್ತೆರಡು ಅಪರಾಧಗಳಿಂದ ರಹಿತವಾಗಿತ್ತು. ಆಚಾರ್ಯರು ಕೇವಲ ಹೊರಗಿನ ಪುಷ್ಪಗಳಿಂದಷ್ಟೇ ಅಲ್ಲ. ಅಹಿಂಸೆ-ಇಂದ್ರಿಯನಿಗ್ರಹ-ಸರ್ವಭೂತದಯೆ-ಕ್ಷಮಾ-ಜ್ಞಾನ-ತಪಸ್ಸು-ಧ್ಯಾನ-ಸತ್ಯ ಎಂಬ ಎಂಟು ಭಾವ ಪುಷ್ಪಗಳಿಂದ ಭಗವಂತನನ್ನು ಸದಾ ಪೂಜಿಸುತ್ತಿರುವವರು.

**(ಮುಂದುವರಿಯುವುದು)**

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ





# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಧಾರುಣಿಗೆ ವರಚಕ್ರವರ್ತಿಗ**
**ಳಾರು ಮಂದಿ ನೃಪಾಲಕರು ಹದಿ**
**ನಾರು ಮಂದಿಯು ಧರಣಿಯನು ತಾವಾಳ್ದ ನೃಪರೆನಿತೋ ।**
**ವೀರರನು ಮೆಚ್ಚಿದಳೆ ಧರಣೀ**
**ನಾರಿ ಬಲು ಮೋಹದೊಳು ನಿನ್ನನು**
**ಸೇರಿ ಓಲೈಸುವಳು ರಕ್ಷಿಸು ನಮ್ಮನನವರತ ॥೫೨॥**

ಭೂಮಿಗೆ ದೊಡ್ಡ ದೊಡ್ಡ ಚಕ್ರವರ್ತಿಗಳು ಆರು ಮಂದಿ. ರಾಜರು ಹದಿನಾರು ಮಂದಿ. ಭೂಮಿಯನ್ನು ತಾವು ಆಳಿದ ರಾಜರು ಅದೆಷ್ಟೋ !. ಆದರೆ, ಭೂ ರಮಣಿ ಈ ವೀರರನ್ನು ಮೆಚ್ಚಿದಳೆ? ಬಲು ಮೋಹದಲ್ಲಿ ನಿನ್ನನ್ನೇ ಸೇರಿ ಓಲೈಸುತ್ತಾಳೆ. ನೀನು ನಮ್ಮನ್ನು ಸದಾ ರಕ್ಷಿಸು.

## ಧಾರುಣಿಗೆ ವರ ಚಕ್ರವರ್ತಿಗಳಾರು ಮಂದಿ

ಕಾರ್ತವೀರ್ಯಾದಿ ಚಕ್ರವರ್ತಿ ರಾಜರು, ನೂರು ಮಂದಿ ವ್ಯಾಪ್ತೋಪಾಸಕರು, ಕರ್ಮಜ ದೇವತೆಗಳಿಗೆ ಸಮಾನರು. ಇನ್ನೂ ಅನೇಕ ಮಂದಿ ಶ್ರೀರಾಮ ಮುಂತಾದ ಭಗವದವತಾರಿ ಚಕ್ರವರ್ತಿಗಳು, ಧರ್ಮರಾಜ ಮುಂತಾದ ದೇವಾಂಶ ಸಂಭೂತರಾದ ಚಕ್ರವರ್ತಿಗಳು, ಮನುಷ್ಯೋತ್ತಮರಿಗಿಂತ ಉತ್ತಮರಾದ ಬೇರೆ ಚಕ್ರವರ್ತಿಗಳು ಲೆಕ್ಕವಿಲ್ಲದಷ್ಟು ಇದ್ದಾರೆ. ಆದರೆ ಇವರಲ್ಲೆಲ್ಲ ವರ ಚಕ್ರವರ್ತಿಗಳು, ಶಕಪುರುಷರಾದ್ದರಿಂದ ಶ್ರೇಷ್ಠರೆನಿಸಿದ ಚಕ್ರವರ್ತಿಗಳು ಕಲಿಯುಗದಲ್ಲಿ ಆರುಮಂದಿ. ದೇವಮಾನದ ಸಾವಿರದಿನ್ನೂರು ವರ್ಷಗಳು ಕಲಿಯುಗ ಪ್ರಮಾಣ. ಅಂದರೆ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ಮನುಷ್ಯಮಾನದ ವರ್ಷಗಳು. ಇವುಗಳಲ್ಲಿ ಹಸ್ತಿನಾವತಿಯಲ್ಲಿ ಆಳಿದ ಧರ್ಮರಾಜನ ಯುಧಿಷ್ಠಿರ ಶಕೆ 3044 ವರ್ಷಗಳು. ಬಳಿಕ ಉಜ್ಜಯಿನಿಯ ವಿಕ್ರಮಾದಿತ್ಯನ ವಿಕ್ರಮ ಶಕೆ 135 ವರ್ಷಗಳು. ಪ್ರತಿಷ್ಠಾನ ನಗರದ ಶಾಲಿವಾಹನ

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

ಚಕ್ರವರ್ತಿಯ ಶಕೆ 18,000 ವರ್ಷಗಳು. ವೈತರಣಿ ನಗರಿಯ ವಿಜಯಾಭಿನಂದರಾಜನ ವಿಜಯಶಕೆ 10,000 ವರ್ಷಗಳು. ಬಳಿಕ ಕಾವೇರೀತೀರದ ನಾಗಾರ್ಜುನ ರಾಜನ ಶಕೆ 4,00,000 ವರ್ಷಗಳು. ಕೊನೆಯಲ್ಲಿ ಗೌಡದೇಶದ ದೊರೆ ಕಲ್ಕಿ ಮಹಾರಾಜನ ಶಕೆ 821 ವರ್ಷಗಳು.

## ನೃಪಾಲಕರು ಹದಿನಾರು ಮಂದಿಯು

ಅಭಿಮನ್ಯು ವಧೆಯನ್ನು ಕೇಳಿ ಧರ್ಮರಾಜ ಶೋಕಿಸಿದಾಗ ಶ್ರೀವೇದವ್ಯಾಸರು ಬಂದು ಸಮಾಧಾನ ಹೇಳುತ್ತ ಹದಿನಾರು ಮಂದಿ ಮಹಾರಾಜರುಗಳು ಆಗಿ ಹೋಗಿದ್ದಾರೆ. ಅಭಿಮನ್ಯುವಿನಿಂದ ಬಹಳ ಹೆಚ್ಚು ಕೀರ್ತಿಶಾಲಿಗಳಾಗಿ ಮೆರೆದವರು ಕೂಡ ಸತ್ತಿರುವಾಗ ಅಭಿಮನ್ಯುವಿನ ಮರಣಕ್ಕೆ ಶೋಕಿಸುವುದು ಉಚಿತವಾಗದು ಎಂದರು. ಮುಂದೆ ಶಾಂತಿಪರ್ವದಲ್ಲಿ ಅರ್ಜುನನ ಅಪೇಕ್ಷೆಯಂತೆ ಶ್ರೀಕೃಷ್ಣನೂ ಈ ಹದಿನಾರು ರಾಜರ ಕಥೆಗಳನ್ನು ಸಂಕ್ಷೇಪವಾಗಿ ಹೇಳಿ ಧರ್ಮರಾಜನನ್ನು ಸಮಾಧಾನಪಡಿಸುತ್ತಾನೆ.

ಮರುತ್ತ, ಸುಹೋತ್ರ, ಬೃಹದ್ರಥ, ಶಿಬಿ, ದೌಷ್ಯಂತಿಭರತ, ದಾಶರಥಿರಾಮ, ಭಗೀರಥ, ದಿಲೀಪ, ಮಾಂಧಾತ, ಯಯಾತಿ, ಅಂಬರೀಷ, ಶಶಬಿಂದು, ಗಯ, ರಂತಿದೇವ, ಸಗರ, ಪೃಥು ಇವರೇ ಆ ಹದಿನಾರು ರಾಜರು. ದ್ರೋಣಪರ್ವದಲ್ಲಿ ಸಗರ ಚಕ್ರವರ್ತಿಯ ಬದಲು ಪರಶುರಾಮನನ್ನು ಸೇರಿಸಿಕೊಂಡು ಹದಿನಾರು ರಾಜರನ್ನು ವರ್ಣಿಸಲಾಗಿದೆ. ಪರಶುರಾಮ ಚಕ್ರವರ್ತಿಯಾಗಿ ಭೂಮಿಯನ್ನು ಆಳಲಿಲ್ಲ. ಯಜ್ಞಮಾಡಿ ಸಮಸ್ತ ಭೂಮಂಡಲವನ್ನು ಕಶ್ಯಪ ಮುನಿಗೆ ದಾನಮಾಡಿದ. ಸ್ವತಃ ಬೇರೆ ಪರಶುರಾಮ ಸೃಷ್ಟಿ ಮಾಡಿ ಅಲ್ಲಿ ವಾಸ ಮಾಡಿದ. ಆದರೂ ಎಲ್ಲ ರಾಜರನ್ನು ಗೆದ್ದುದರಿಂದ ಅನಭಿಷಿಕ್ತ ದೊರೆ ಎನಿಸಿದನೆಂದು ರಾಜರ ಸಾಲಿನಲ್ಲಿ ಅವನನ್ನೂ ಸೇರಿಸಲಾಗಿದೆ.

## ಧರಣಿಯನು ತಾವಾಳ್ದನೃಪರೆನಿತೊ

ಪ್ರಸಿದ್ಧರಾದ ರಾಜರು ಇಷ್ಟು ಮಂದಿ. ಇನ್ನು ಅಪ್ರಸಿದ್ಧರಾದ ರಾಜರು ಎಷ್ಟೋ ! ಎಲ್ಲರೂ ಭೂಮಿಯನ್ನು ತಾವು ಆಳಿದವರೆ, ಭೂರಮಣಿ ಮೆಚ್ಚುವಂತೆ ಚೆನ್ನಾಗಿ ಆಳಿದರು. ಉದಾಃ **ರಾಮೋ ರಾಮೋ ರಾಮ ಇತಿ ಪ್ರಜಾನಾಮಭವತ್ ಕಥಾ ।**

ಜನರು ಪರಸ್ಪರ ಕಷ್ಟಸುಖಗಳನ್ನು ಹೇಳಿಕೊಳ್ಳುವಾಗಲೆಲ್ಲ ಪ್ರೀತಿಯಿಂದ ರಾಮನ ಬಗ್ಗೆಯೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಿದ್ದರು!

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.



## ವೀರರನು ಮೆಚ್ಚಿದಳೆ ಧರಣೀ ನಾರಿ?

ಮೆಚ್ಚುವಂತೆ ಅವರೆನೋ ಆಳಿದರು, ಅವಳು ಮಾತ್ರ ಮೆಚ್ಚಲಿಲ್ಲ! ಮೆಚ್ಚಿದರೂ ಹೆಣ್ಣು ಗಂಡನ್ನು ಮೆಚ್ಚುವಂತೆ ಮೆಚ್ಚಲಿಲ್ಲ! ತಾಯಿ ಮಗುವನ್ನು ಮೆಚ್ಚಿಕೊಳ್ಳುವಂತೆ ಭೂಮಿತಾಯಿ ಅವರನ್ನು ಮೆಚ್ಚಿದಳು. ಏಕೆಂದರೆ ಅವಳ ರಕ್ಷಣೆಯಲ್ಲಿ ಇವರಿದ್ದರು. ಇವರ ರಕ್ಷಣೆಯಲ್ಲಿ ಅವಳಿರಲಿಲ್ಲ. ಅವಳಿಗೆ ಸದಾ ರಕ್ಷಕ ಸರ್ವರಕ್ಷಕ ಪರಮಾತ್ಮನೆ. ಜಡಭರತ ರಹೂಗಣರಾಜನಿಗೆ ಹೇಳುವ ಕಿವಿಮಾತು

**ತವ ಗೋಪ್ತ್ರೀ ತು ಪೃಥಿವೀ ನ ತ್ವಂ ಗೋಪ್ತಾ ಕ್ಷಿತೇಃ ಸ್ಮೃತಃ ।** (ಭಾಗ ತಾ. 5-12-11)
ನಿನಗೆ ರಕ್ಷಕಳು ಪೃಥಿವಿ, ಹೊರತು, ನೀನು ಪೃಥಿವಿಗೆ ರಕ್ಷಕನಲ್ಲ.

## ಬಲು ಮೋಹದೊಳು ನಿನ್ನನು ಸೇರಿ ಓಲೈಸಿಹಳು

**ಅನಾದ್ಯನಂತಕಾಲೇಷು ವಿಷ್ಣುಮೇವಾಶ್ರಿತಾ ರಮಾ ।** (ಭಾಗ. ತಾ. 8.8. )

ಅನಾದಿ ಅನಂತ ಕಾಲಗಳಲ್ಲಿಯೂ ರಮಾದೇವಿ ವಿಷ್ಣುವನ್ನೇ ಆಶ್ರಯಿಸಿದವಳು. ಶ್ರೀ-ಭೂ-ದುರ್ಗಾ ಎಂಬ ಅವಳ ಮೂರುರೂಪಗಳಲ್ಲಿ ಭೂರೂಪವೆ ಭೂಮಿ ತಾಯಿ. ಅವಳ ಆವೇಶಬಲದಿಂದ ನಮ್ಮನ್ನು ಹೊರುವ ಧರಾದೇವಿಯೂ ಶ್ರೀವರಾಹನ ಪತ್ನಿ. ಹೀಗಾಗಿ ರಾಜರು ಭೂಮಿಯನ್ನಾಳಿ ತಾವು ಭೂಪರೆಂದುಕೊಂಡರೂ ವಾಸ್ತವದಲ್ಲಿ ಅವರು ಭೂಮಿಗೆ 'ಪ' ಪಾಲಕರು ಅಲ್ಲ. ಭೂಮಿಯೆ ಅವರಿಗೆ ಪಾಲಕಳು. ತತ್ಪುರುಷ ಸಮಾಸ ಮೇಲುನೋಟಕ್ಕೆ ಸರಿ ಎನಿಸಿದರೂ ವಿಚಾರಿಸಿದಾಗ ಬಹುವ್ರೀಹಿಯೆ ಉಚಿತ.

ಈ ರಾಜರು ಮರಣ ಹೊಂದಿದಾಗ ಭೂರಮಣಿ ಅವರನ್ನು ಹಿಂಬಾಲಿಸಿ ಹೋಗಲಿಲ್ಲ. ಅವರು ಭೂತಪೂರ್ವರಾಜರು, ಭೂತಪೂರ್ವ ಭೂಪತಿಗಳು. ಶ್ರೀಹರಿಯಾದರೋ ಹಿಂದೆಯೂ ಮುಂದೆಯೂ ಎಂದೆಂದಿಗೂ ರಾಜನೆ, ರಾಜಾಧಿರಾಜನೆ, ಭೂಪತಿಯೆ, ಶ್ರೀರಮಣಿಭೂರಮಣಿಯರನ್ನಾಳುವ ಶ್ರೀಪತಿ ಭೂಪತಿ ಅವನೆ.

**ಅಂತರ್ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತ ಃ ।**

'ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ ' ಎನ್ನುವಂತೆ ಭೂಮಿಯ ಒಳಗೂ ಹೊರಗೂ ಧಾರಕನಾಗಿ ಪಾಲಕನಾಗಿ ಅವಳಿಗೆ ಪತಿಯಾಗಿ ಭೂಧರ ಭೂಪತಿ ಎನಿಸಿದವನು ಅವನೆ. ಈ ರಾಜರುಗಳೆಲ್ಲ ರಾಜರು, ನೃಪರು, ಮನುಷ್ಯರಿಗೆ ರಂಜನೆ ನೀಡಿ ಅವರನ್ನು ಆಳಿದವರು ನಿಜ. ಆದರೆ ಇದೀಗ ಅವರು ಮಾಜಿರಾಜರು, ಮಾಜಿ ನೃಪರು.

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ಪರಮಾತ್ಮ ಸದಾ ರಾಜ, ಸದಾ ನೃಪ. ಧರಣಿದೇವಿ ಅವರ ಹಿಂದೆ ಹೋಗಲಿಲ್ಲ. ಇವನ ಪಾದ ಬಿಡಲಿಲ್ಲ.

ಆದರೆ ಈ ರಾಜರ ಪೈಕಿ, ಶ್ರೀರಾಮನೂ ಒಬ್ಬ. ಹಿಂದೆ ಹೇಳಿದಂತೆ ಪರಶುರಾಮನೂ ಒಬ್ಬ. ಶಕಪುರುಷನಾದ ಕಲ್ಕಿಯೂ ಒಬ್ಬ. ಇವರೆಲ್ಲರೂ ಮರಣ ಹೊಂದಿದರೆ?

ಭಗವಂತನಿಗೆ ಜನನ ಮರಣಗಳಿಲ್ಲ. ಇದ್ದರೆ ಅವನು ಭಗವಂತನಲ್ಲ. ಅವನಿಗೂ ಅವನ ಅವತಾರರೂಪಗಳಿಗೂ ಭೇದವಿಲ್ಲ. ಹೀಗಾಗಿ ಶ್ರೀರಾಮ, ಪರಶುರಾಮ, ಕೃಷ್ಣ, ಕಲ್ಕಿ ಎಲ್ಲರೂ ಜನನ ಮರಣರಹಿತರು. ಆದರೆ ಮಹಾಭಾರತದಲ್ಲಿ ಇವರೆಲ್ಲರಿಗೂ ಜನನ ಮರಣಗಳು ಉಕ್ತವಾಗಿವೆ!

**ರಾಮಂ ದಾಶರಥಿಂ ಚೈವ ಮೃತಂ ಸೃಂಜಯ ಶುಶ್ರುಮ** । ಸೃಂಜಯರಾಜನಿಗೆ ನಾರದರು ಹೇಳುವ ಮಾತು 'ದಶರಥ ಪುತ್ರ ಶ್ರೀರಾಮನೂ ಸತ್ತನೆಂದು ಕೇಳಿದ್ದೇನೆ'.

**ರಾಮೋ ಮಹಾತಪಾಃ ಶೂರೋ ವೀರಲೋಕನಮಸ್ಕೃತಃ** ।

**ಜಾಮದಗ್ನ್ಯೋಽಪ್ಯತಿಯಶಾ ಅವಿತೃಪ್ತೋ ಮರಿಷ್ಯತಿ** ।

'ಮಹಾತಪಸ್ವಿ, ಶೂರ, ವೀರಜನರೆಲ್ಲರೂ ಅವನಿಗೆ ಮಣಿಯುತ್ತಾರೆ. ಅತ್ಯಂತ ಕೀರ್ತಿಶಾಲಿ ಅಂಥ ಜಮದಗ್ನಿಪುತ್ರನಾದ ಪರಶುರಾಮನೂ ಅತೃಪ್ತನಾಗಿ ಮರಣ ಹೊಂದಲಿದ್ದಾನೆ'.

**ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ** ।

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳುವ ಮಾತು. 'ನನಗೂ ನಿನಗೂ ಅನೇಕ ಜನ್ಮಗಳು ಆಗಿ ಹೋಗಿವೆ !'

ದಾಸರೂ ಹೇಳುತ್ತಿದ್ದಾರೆ, 'ವೀರರನ್ನು ಮೆಚ್ಚಿದಳೆ, ಧರಣೀನಾರಿ? ಮೆಚ್ಚಿ ಮರಣದಲ್ಲಿ ಅವರ ಸಂಗಡ ಬಂದಳೆ?' ಈ ಮಾತು ಬೇರೆ ರಾಜರಿಗೆ ಅನ್ವಯಿಸಬಲ್ಲುದು. ರಾಜಾ ಶ್ರೀರಾಮಚಂದ್ರನಿಗೆ ಅನ್ವಯಿಸೀತೆ?

ವಸ್ತುತಃ ಭಗವಂತನ ಅವತಾರಗಳಿಗೆ ಭೂಮಿಯಲ್ಲಿ ಜನನವೆಂದರೆ ಭೂಮಿಯ ಜನರ ಕಣ್ಣಿಗೆ ಗೋಚರವಾಗುವುದು, ಮರಣವೆಂದರೆ ಮರೆಯಾಗುವುದು. ನಿತ್ಯಜ್ಞಾನಾನಂದಮಯವಾದ ಅವನ ಅವತಾರರೂಪಗಳಿಗೆ ಉತ್ಪತ್ತಿನಾಶಗಳಿಲ್ಲ. ಸದಾ ಅವ್ಯಕ್ತವಾಗಿರುವುದು ಅವುಗಳಿಗೆ ಸ್ವಭಾವ. ಭಕ್ತರಿಗಾಗಿ ಅಚಿಂತ್ಯಶಕ್ತಿಯಿಂದ ಆತ ವ್ಯಕ್ತನಾಗಿ

ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.



ಗೋಚರನಾಗುತ್ತಾನೆ. ಅವತಾರ ಕಾರ್ಯಗಳನ್ನೆಲ್ಲ ಯಶಸ್ವಿಯಾಗಿ ಸಾಧಿಸಿ ತೃಪ್ತಿಗೊಂಡು ತಾನೇ ಮರೆಯಾಗುತ್ತಾನೆ.

'ಪರಶುರಾಮ ಅವಿತೃಪ್ತನಾಗಿ ಸಾಯಲಿದ್ದಾನೆ' ಎನ್ನುವಲ್ಲಿ ಭಾರತವಚನ ವಸ್ತುತಃ ಹೇಳುವುದೇ ಬೇರೆ. 'ಅವಿತೃಪ್ತ' ಎಂಬಲ್ಲಿ 'ವಿ' ಎನ್ನುವುದು ನಿಷೇಧಾರ್ಥಕ. ಎಂದೂ ಅತೃಪ್ತನಾಗದವನು. ಅವಿತೃಪ್ತ, ಅಂದರೆ ಪೂರ್ಣತೃಪ್ತ. ಪೂರ್ಣತೃಪ್ತನಾಗಿ ತಾನೆ ಮರೆಯಾಗುವುದೇ ಅವನಿಗೆ ಸಾವು. ಇದು ಭಾಗವತ ತಾತ್ಪರ್ಯ (1.13.8) ದಲ್ಲಿ ಸ್ಪಷ್ಟವಿದೆ.

ಇಂಥ ಭೂರಮಣ ಹರಿಯೆ, ನಮ್ಮನ್ನು ನೀನೇ ಸದಾ ಕಾಪಾಡಬೇಕು.

**(ಮುಂದುವರಿಯುವುದು)**

(2ನೇ ಪುಟದಿಂದ......)

**(ಭಕ್ತಿರೇವ ಗರೀಯಸಿ** ಮೋಕ್ಷಸಾಧನಗಳ ಸಮುದಾಯದಲ್ಲಿ ಭಕ್ತಿಯೇ ಶ್ರೇಷ್ಠವಾದುದೆಂದು ಹೇಳಿರುವರೇನೋ ನಿಜ. ಆದರೆ ಅವರ ಮತ ಪ್ರಕಾರ ಬ್ರಹ್ಮನಿರ್ಗುಣ ಹಾಗೂ ನಿರಾಕಾರ. ಇಂತಹ ಬ್ರಹ್ಮನಲ್ಲಿ ಹೇಗೇ ತಾನೇ ಭಕ್ತಿಭಾವವು ಹುಟ್ಟೀತು? ಬದಲಾಗಿ ಅಂತಹ ಬ್ರಹ್ಮನ ಸವರೂಪ ಜ್ಞಾನವೂ ಭಕ್ತಿಭಾವ ಉಂಟಾಗಲು ಬಾಧಕವೇ ಆಗುವುದು. ರಾಮಾನುಜರು ಶ್ರೀಮಧ್ವರು ಹೇಳುವಂತೆ ಬ್ರಹ್ಮ ಅನಂತಕಲ್ಯಾಣ ಗುಣ ಪರಿಪೂರ್ಣನಾದವನು. ದಿವ್ಯ ಮಂಗಳದೇಹವುಳ್ಳವನೆಂದೇನೋ ಹೇಳುವರು. ಆದುದರಿಂದ ಅವರ ನಿರೂಪಣೆ ಪ್ರಕಾರ ಬ್ರಹ್ಮನಲ್ಲಿ ಭಕ್ತಿಭಾವವು ಉದಯಿಸಬಹುದು. ಆದರೆ ಪರಮಪುರುಷಾರ್ಥವಾದ ಮೋಕ್ಷಕ್ಕೆ ಇಂತಹ ಭಕ್ತಿ ಬೇಕೇಬೇಕೆಂದು ಅವರು ಪ್ರತಿಪಾದಿಸುವುದಿಲ್ಲ. ಬ್ರಹ್ಮನಲ್ಲಿ ದ್ವೇಷವನ್ನು ಮಾಡಿಯೂ, ಆ ಮೂಲಕ ಏಕಾಗ್ರತೆ ಸಂಪಾದಿಸಿಕೊಂಡು ಮುಕ್ತಿಯನ್ನು ಪಡೆಯಬಹುದೆಂದು ಅವರ ಅಭಿಪ್ರಾಯ, ಹೀಗಾಗಿ ಅವರ ಮತ ಪ್ರಕಾರ ಭಕ್ತಿಗೆ ಅಂತಹ ಮಹತ್ತ್ವವೇನೂ ಸಂದಂತಾಗಲಿಲ್ಲ.

ಶ್ರೀಮಧ್ವಮತದಲ್ಲಾದರೂ ಸಾಧಕನಿಗೆ ಭಗವಂತನಲ್ಲಿ ಭಕ್ತಿಭಾವವು ಉಕ್ಕೇರುವಂತೆ ಅವನ ಸ್ವರೂಪವನ್ನು ಪ್ರತಿಪಾದಿಸಲಾಗಿದೆಯಲ್ಲದೆ, ಇಂತಹ ಭಕ್ತಿಯಿಂದಲೇ ಮುಕ್ತಿಯನ್ನು ಗಳಿಸಲು ಸಾಧ್ಯ ಎಂದು ಸಮರ್ಥಿಸುವುದರ ಮೂಲಕ ಭಕ್ತಿಗೆ ಶ್ರೇಷ್ಠ ಸ್ಥಾನಮಾನವನ್ನು ಸಾಧಿಸಿಕೊಡಲಾಗಿದೆ.

ಭಕ್ತಿಭಾವ ವ್ಯಕ್ತಿಯ ಅಹಂಕಾರವನ್ನು ತೊಲಗಿಸುವಂತಹದ್ದು, ಇಂತಹ ಭಕ್ತಿಭಾವಕ್ಕೆ ಅಗ್ರ ಪ್ರಾಶಸ್ತ್ಯವನ್ನು [illegible] ವ್ಯಾಪಕವಾಗಿ ಆದಲಿ ಸಜ್ಜನರಲ್ಲಿ ಅಹಂಕಾರವು ಕಡಿಮೆ ಆಗಿ ಒಳ್ಳೆಯ ವಾತಾವರಣ ಸೃಷ್ಟಿ ಆಗಲು ಸಾಧ್ಯ.

ಮುಖಪುಟಲೇಖನ

# "ವಾದಿರಾಜ ಶ್ರೀಪಾದೋಽಭೀಷ್ಟದಃ ಸತಾಂ"

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ನೂರಇಪ್ಪತ್ತು ಸಂವತ್ಸರಗಳ ಮೃತ್ಯುವನ್ನೇ ಗೆದ್ದ ಅಮರ್ತ್ಯರು. ನೂರ ಹದಿಮೂರು ವರುಷಗಳ ಅತಿದೀರ್ಘಕಾಲದ ಅಪರೂಪದ ಅಖಂಡ ಬ್ರಹ್ಮಚರ್ಯದ ಸಕಲಭೋಗಭಾಗ್ಯಗಳ ತ್ಯಾಗದ ಸಂನ್ಯಾಸಬ್ರಹ್ಮಚರ್ಯ. ಶ್ರೀ ಭೂವರಾಹನೊಂದಿಗೆ ಹಯಗ್ರೀವನನ್ನು ಶತಮಾನಕ್ಕಿಂತಲೂ ಅಧಿಕ ಕಾಲ ಪೂಜಿಸಿದ ವಾದಿರಾಜರು ಐದು ಪರ್ಯಾಯಗಳಲ್ಲಿ ರುಕ್ಮಿಣೀ ಕರಾರ್ಚಿತ ಜಗದ್ಗುರು ಶ್ರೀಮಧ್ವಚಾರ್ಯರಿಂದ ಪ್ರತಿಷ್ಠಿತ ಶ್ರೀಕೃಷ್ಣನನ್ನು ಮುಟ್ಟಿ ಪೂಜಿಸಿದ ಯತಿ ಚಕ್ರವರ್ತಿ ಇವರೇ. ಪ್ರಪಂಚದಲ್ಲೇ ಅಪರೂಪವೆನಿಸಿದ ಸಶರೀರ ವೃಂದಾವನ ಪ್ರವೇಶಿಸಿದ ಮೊಟ್ಟ ಮೊದಲ ಧೀರ ಯತಿ ಪುಂಗವರು ಇವರು. ಸರ್ವಮಾನ್ಯರಾಗಿ ಶಾಶ್ವತವಾಗಿ ಶ್ರೀಮದಾಚಾರ್ಯರು ಸೀಮಿತಗೊಳಿಸಿದ ದ್ವೈಮಾಸಿಕ ಪರ್ಯಾಯವನ್ನು ಸರ್ವಸಮ್ಮತವಾಗಿ ವರ್ಷದ್ವಯಗಳಿಗೆ ಮೀರಿಸಿ ನಡೆಸಿದ ಮಹಾಯತಿಸಾರ್ವಭೌಮರು ಇವರು. ಸರಸ ಕವಿಗಳು ಹೌದು. ಸ್ವರಸ ಶಾಸ್ತ್ರಕಾರರೂ ಹೌದು. ಸಂಸ್ಕೃತ ಕಾವ್ಯದಲ್ಲಿ ಅಸಾಧಾರಣ ಪಾಂಡಿತ್ಯ. ಕನ್ನಡ ಹಾಡುಗಳಲ್ಲಿ ಅನ್ಯಾದೃಶ ನೈಪುಣ್ಯ. ತುಳುವಿನಲ್ಲಿ ಪಾಡ್ದನಗಳ ಮೂಲಕ ಜನಸಾಮಾನ್ಯರನ್ನು ತನ್ನ ಕಡೆಗೆ ಸೆಳೆದ ಸಹೃದಯ ಸಾಹಿತಿಗಳು. ತಮಿಳು ಕನ್ನಡ ತೆಲಗುಗಳ ಬಹುಭಾಷಾ ಕವಿಗಳೂ ಹೌದು. ಸಕಲ ವಿದ್ಯಾಪಾರಂಗತರಾಗಿರುವ ಇವರು ಭಾವಿ ಸಮೀರರಾಗಿಯೂ ಮೆರೆದಾಡುವ ನಿಜಯೋಗಿಗಳೂ ಹೌದು.

**ಸ್ವಸ್ತಿ ಶ್ರೀ ಜಯಶಾಲಿವಾಹನಶಕೇ ಸಾರ್ಧಾತ್ ಸಹಸ್ರಾತ್ ಪರಂ**
**ದ್ವಾವಿಂಶೇ ಶರದಂ ಗತೇ ಪ್ರಭವತಿ ಶ್ರೀಶಾರ್ವರೀವತ್ಸರೇ।**
**ಮಾಸೇ ಫಾಲ್ಗುಣಕೇ ಸಿತೇತರತೃತೀಯಾಯಾಂ ತಿಥೌ ವಿದಿನೇ**
**ಸ್ವಾತೀಹರ್ಷಣಸಂಯುತೇ ಹರಿಪದಂ ಶ್ರೀವಾದಿರಾಜೋ ಹ್ಯಗಾತ್॥**

–ಇತಿ ಶ್ರೀವಾದಿರಾಜಗುರುಚರಿತಾಮೃತೇ(6/73)

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**



## ಯೋಗದೀಪಿಕಾ ವಿದ್ಯಾಪೀಠ– 2008–09ರ ಪ್ರವೇಶಕ್ಕೆ ಅರ್ಜಿ ಆಹ್ವಾನ

ತ್ರೈಲೋಕ್ಯ ಗುರುಗಳಾದ ಶ್ರೀ ಮಧ್ವಾಚಾರ್ಯರ ನಿಜಶಿಷ್ಯಪ್ರವರರಾದ ಶ್ರೀ ಹೃಷಿಕೇಶತೀರ್ಥರ ಪರಂಪರೆಯಲ್ಲಿ ಇಪ್ಪತ್ತೈದನೆಯ ಯತಿವರ್ಯರಾಗಿ ಪೀಠವನ್ನಲಂಕರಿಸಿದ ಶ್ರೀ ರಘುಪ್ರವೀರತೀರ್ಥರ ತಪಸ್ಸಿಗೆ ಒಲಿದ ಘಟಿಕಾಚಲದ ಶ್ರೀಮುಖ್ಯಪ್ರಾಣದೇವರ ಆಡುಂಬೊಲವಾದ, ಮಂಗಳಾಷ್ಟಕಕರ್ತಾರರಾಗಿ ಪ್ರಖ್ಯಾತರಾದ ಶ್ರೀರಾಜರಾಜೇಶ್ವರತೀರ್ಥರು ಹಾಗೂ ಬಹುಗ್ರಂಥಪ್ರಣೇತೃಗಳಾದ ಯತಿತತಿನಿರ್ಮಾತೃಗಳಾದ, ವಿದ್ವದ್ವೃಂದವಿದ್ಯಾದಾತೃಗಳಾದ, ವಿದ್ಯಾಪೀಠ–ಮಧ್ವಮಠವೃಂದಸಂಸ್ಥಾಪಕರಾದ, ದೇಶಾದ್ಯಂತ ವಾಕ್ಯಾರ್ಥನಡೆಸಿ–ಪ್ರತಿವಾದಿಗಳನ್ನು ಜಯಿಸಿ ವಾದಿಭಯಂಕರರೆನಿಸಿದ, ಪರವಿದ್ಯೆಗೆ ಮಾನ್ಯತೆಯನ್ನು ತಂದುಕೊಟ್ಟು ಪರವಿದ್ಯೆಯಿಂದ ಮಾನ್ಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರೇ ಮೊದಲಾದಯತಿವರೇಣ್ಯರ ತಪೋಭೂಮಿಯಾದ, ಶ್ರೀವೇದವ್ಯಾಸದೇವರ ನಿತ್ಯಸನ್ನಿಧಾನವಿರುವ ಪಲಿಮಾರಿನ ಶ್ರೀಮಠದಲ್ಲಿ ಶ್ರೀ ಮಠದ ಯೋಗದೀಪಿಕಾ ಟ್ರಸ್ಟ್‌ನ ಮೂಲಕ ನಡೆಸುವ ಯೋಗದೀಪಿಕಾ ವಿದ್ಯಾಪೀಠದಲ್ಲಿ ವೇದ, ಸಂಸ್ಕೃತ, ಪೌರೋಹಿತ್ಯ, ಆಗಮ ಹಾಗೂ ಜ್ಯೋತಿಷ್ಯಗಳ ಬಗ್ಗೆ ಆರು ವರ್ಷಗಳ ಶಿಕ್ಷಣ ನೀಡುತ್ತಿದ್ದು ಇದಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಏಪ್ರಿಲ್ ತಿಂಗಳ ದಿನಾಂಕ 20ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ಈ ಸಂಸ್ಥೆಯು ಕರ್ನಾಟಕ ಸರಕಾರದ ಹಿಂದೂ ಧಾರ್ಮಿಕದತ್ತಿ ಇಲಾಖೆಯ ಮಾನ್ಯತೆ ಪಡೆದಿದ್ದು ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಮಂಡಳಿ ನಡೆಸುವ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಭಾಗವಹಿಸುವಂತೆ ಶಿಕ್ಷಣ ನೀಡಲಾಗುತ್ತಿದೆ.

ಉಪನೀತರಾದ 10 ವರ್ಷಕ್ಕಿಂತ ಮೇಲ್ಪಟ್ಟು 16 ವರ್ಷದ ಒಳಗಿನ ಬ್ರಾಹ್ಮಣ ವಟುಗಳು ಪ್ರವೇಶಪಡೆಯಲು ಅರ್ಹರಾಗಿದ್ದು (ಅರ್ಜಿಯಲ್ಲಿ) ವಿದ್ಯಾರ್ಥಿಯ ಹೆಸರು, ಪೂರ್ಣವಿಳಾಸ (ದೂರವಾಣಿ ಸಂಖ್ಯೆ ಸಹಿತ) ವಯಸ್ಸು, ಗುರುಮಠ, ಗೋತ್ರ, ವೇದಶಾಖೆ ಈವರೆಗೆ ಆದ ವಿದ್ಯಾಭ್ಯಾಸದ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಲ್ಲಿಸಬಹುದು.

ಕಾರ್ಯದರ್ಶಿ
ಯೋಗದೀಪಿಕಾ ಟ್ರಸ್ಟ್
ಶ್ರೀಪಲಿಮಾರು ಮಠ,
ರಥಬೀದಿ, ಉಡುಪಿ–576 101.
ದೂ. ಸಂಖ್ಯೆ: 2523402

**ವೇದ–ಇತಿಹಾಸ–ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

KPÀªÁl (vÁAvÀæ ªÀÄoÀ)

²æÃ«µÀÄÚ¥ÀÄÄÄwð zÉÃªÀgÀ PÀÄÄA¨sÁ©üµÉÃPÀ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

**EvÀÄÛA ¸ÀªÀÃB ¸ÀªÀÃgÀZÉÃÀðÃ zsÀgÉÄAiÀiÁA**

**ZÀPÉæÃ ªÀ¸ÀA ±ÉÃµÀvÀÀiÉÃÃ ±ÀAiÀiÁ¥ÉÃ|**

**UÁæªÉÃÃB ªÁvÉÃB ¥Á«vÉÃ PÀtéwÃxÉðÉB**

**¨sÀPÀÛgÀÃvÀå ¸ÀAÄ¢ÃfÀ¤ÃÀ¨sÉÃzsÀB||**

**(²æÃ ªÀÄzsÀé«dAiÀÄ)**

(¸ÀdÓ£ÀjAzÀ DgÁ¢ü¸À®qÀÄªÀ dUÀzÀÄÎgÀÄ ²æÃ ªÀÄzsÀézÁAiÀÄðgÀÄ ±ÉÃµÀ±Á¬ÄAiÀiÁzÀ, D±ÉÃµÀ£ÁzÀ ²æÃ£ÁgÁAiÀÄt£À AiÉÆÃUÀ¤zÉæAiÀÄ ¥ÀªÀðPÁ®zÀ°è PÀtéwÃxÀðPÉÌ ¸ÀAS¸É¬ÄzÀ UÁ½ÄAzÀ ¥À«vÀæªÁzÀ UÁæªÀÄå ¨sÁµÉAiÀÄ°è vÁAvÀå JAzÀÄ PÀgÉAiÀÄ®àqÀÄªÀ "KPÀªÁl" JA§ HjU£ÀÄ MAzÀÄ ªÀÄoÀzÀ°è ZÁvÀÄªÀiÁðå¸Àå ªÀævÀ ªÀ£ÀÄß PÉÊUÉÆAqÀgÀÄ)–

²æÃ£ÁgÁAiÀÄt ¥ÀÄrvÁZÁAiÀÄðgÀÄ ²æÃªÀÄzsÀé«dAiÀÄzÀ°è w½¹gÀÄªÀAvÉ ¥ÀgÀªÀÄ ¥ÀªÀ£ÀgÁzÀ ²æÃªÀÄzsÀéZÁAiÀÄðgÀÄ ZÁvÀÄªÀiÁð¸Àå ªÀævÀ DZÀj¹zÀ KPÀªÁl (DPÁ®zÀ vÁAvÀåªÀÄoÀ, FV£À PÁ¸ÀgÀUÉÆÃqÀÄ ¸À«ÄÃ¥ÀzÀ ªÀPÁðr) PÉëÃvÀæzÀ ²æÃ«µÀÄÚ¥ÀÄÄwð zÉÃªÀ¸ÁÜ£ÀzÀ fÃtÉÆÃðzÁÝgÀ PÁAiÀÄðUÀ¼ÀÄ AiÀÄxÁªÀvÁÛUÀiÁV £ÀqÉzÀÄ ¢£ÁAPÀ ªÉÄÃ 6 ªÀÄvÀÄÛ 7 gÀAzÀÄ (CPÀëAiÀÄvÀÈwÃAiÀiÁzÀ ¥ÀªÀðPÁ®zÀ°è) ²æÃ ªÀÄzÁZÁAiÀÄðjAzÀ £Á®ÌÌ ªÀiÁ¸À ErÃ ¥ÀÇeÉUÉÆAqÀ «±ÉÃµÀ ¸À¤ßzsÁ£À ªÀÄ¼Àî ²æÃ«µÀÄÚ¥ÀÄÄwð zÉÃªÀgÀ ¥ÀÄåAB¥ÀæwµÉ× ºÁUÀÆ PÀÄÄA¨sÁ©üµÉÃPÀUÀ¼ÀÄ £ÀqÉAiÀÄ°ªÉ. F¥ÀÄtåPÁAiÀÄðzÀ°è ¨sÀUÀªÀzÀãPÀÛgÀÄ ¨sÁUÀªÀ»¹ DZÁAiÀÄðgÀ ºÁUÀÆ PÉëÃvÀæ ¸Áé«ÄAiÀiÁzÀ ²æÃ«µÀÄÚ¥ÀÄÄwð zÉÃªÀgÀ C£ÀÄUÀæºÀPÉÌ ¥ÁvÀægÁUÀ¨ÉÃPÉAzÀÄ CeÉÃQë¸ÀÄvÉÛÃªÉ.

ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ

ಸರ್ವಮೂಲ 21 ಮಾರ್ಚ್ 2008

ªÀ¸ÀAvÀ ²©gÀ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

²æÃ¥ÀÄªÀiÁgÀÄ ªÀÄoÁ¢üÃ±ÀgÁzÀ ²æÃ ²æÃ«zÁå¢üÃ±ÀwÃxÀð ²æÃ¥ÁzÀgÀ £ÉÃvÀÈvÀézÀ°è

¢£ÁAPÀ 18-04-2008 jAzÀ 18-05-2008gÀ ªÀgÉUÉ ZÉÊvÀæ-ªÉÊ±ÁR ªÀiÁ¸ÀUÀ¼À ¥ÀªÀðPÁ®zÀ°è ²æÃ«zÁåªÀiÁ£Àå ªÀ¸ÀAvÀ ²©gÀªÀÅ £ÀqÉAiÀÄ°zÉ

F ¸ÀAzÀ¨sÀðzÀ°è £ÀqÉAiÀÄ°gÀÄªÀ PÁAiÀÄðPÀæªÀÄUÀ¼ÀÄ

*18,19,20-04-2008 ºÀÄ¦ÄªÀÄdÓAiÀÄÄwÃ ªÀÄºÉÆÃvÀìªÀ-

108 ¥ÀªÀªÀiÁ£À ºÉÆÃªÀÄUÀ¼ÀÄ

*29-04 jAzÀ 5-05-2008 gÀªÀgÉUÉ zÁ¸À¸Á»vÀå ¥Àæ²PÀëÃt ²©gÀ

*06 ªÀÄvÀÄÛ 07-05-2008 ªÀPÁðr (KPÀªÁl) ²æÃ«µÀÄÚ¥ÀÄÄwð zÉÃªÀgÀ PÀÄA¨sÁ©üµÉÃPÀ

*10 jAzÀ 14 ªÉÄÃ ªÁå¸À¸Á»vÀå ¥Àæ²PÀëÃt ²©gÀ:

²æÃ«µÀÄÚvÀvÀé«¤tðAiÀÄ ¥ÁoÀ

(«|| J. ºÀjzÁ¸À ¨sÀlÖ ¥ÁæAZÁAiÀÄð ¥ÀÇ.¥Àæ. «zÁå¦ÃoÀ)

*14 jAzÀ 17-05-2008 ²æÃ«zÁåªÀiÁ£ÀåwÃxÀðgÀ DgÁzsÀ£Á ªÀÄºÉÆÃvÀìªÀ

*17 ªÀÄvÀÄÛ 18-05-2008 PÁAvÀªÀgÀ ²æÃ¥ÀÄªÀiÁgÀÄ ªÀÄoÀzÀ°è £ÀgÀ¹AºÀ dAiÀÄAwÃ ªÀÄºÉÆÃvÀìªÀ

**F ¥ÀªÀðPÁ®zÀ°è «zÀézÉÆÃ¶×Ã-«ZÁgÀUÉÆÃ¶×Ã-**
**¸ÀAªÁzÀ-¸ÀAªÁzÀ-** EvÁå¢ ¥ÀæªÀZÀ£À ªÀiÁ°PÉUÀ¼ÀÄ ºÁUÀÆ AiÀÄPÀëUÁ£À ªÀÄÄAvÁzÀ ¸ÁA¸ÀÌöÈwPÀ £ÀqÉAiÀÄ°ªÉ.

ªÁå¸À-zÁ¸À¸Á»vÀåPÉÌ ¸ÀAS¸É¬ÄzÀ F J¯Áè PÁAiÀÄðPÀæªÀÄUÀ¼À°è ¨sÁUÀªÀ»¹ ºÀj-UÀÄgÀÄUÀ¼À C£ÀÄUÀæºÀPÉÌ ¥ÁvÀægÁUÀ¨ÉÃPÉAzÀÄ CeÉÃQë¸ÀÄvÉÛÃªÉ.

## ಉಪನಿಷತ್ ಸಂದೇಶ

ಭಾಗ-13

-ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ಏಷ ತೇಽಗ್ನಿರ್ನಾಚಿಕೇತಃ ಸ್ವರ್ಗ್ಯೋ**
**ಯಮವೃಣೀಥಾ ದ್ವಿತೀಯೇನ ವರೇಣ ।**
**ಏತಮಗ್ನಿಂ ತವೈವ ಪ್ರವಕ್ಷ್ಯಂತಿ ಜನಾಸ-**
**ಸ್ತೃತೀಯಂ ವರಂ ನಚಿಕೇತೋ ವೃಣೀಷ್ವ ॥**

ನೀವು ಬಯಸಿದ ಎರಡನೆಯ ವರವನ್ನು ಪೂರೈಸಲು ಸ್ವರ್ಗಸಾಧನವಾದ ನಚಿಕೇತಾಗ್ನಿಯು ನಿನಗೆ ನಿರೂಪಿಸಲ್ಪಟ್ಟಿತು. ಈ ಅಗ್ನಿಯನ್ನು ನಾಚಿಕೇತಾಗ್ನಿಯಂದೇ ಮುಂದೆ ಎಲ್ಲರೂ ನಿರ್ದೇಶಿಸುವರು. ಎಲೈ ನಚಿಕೇತನೇ, ಮೂರನೆಯ ವರವನ್ನು ಮುಂದೆ ಇಡು.

ಯಮನು ನಚಿಕೇತನಿಗೆ ಅಗ್ನಿಯನ್ನು ನಿರೂಪಿಸಿದನು. ಶಿಷ್ಯನಿಗೆ ಉಪದೇಶಿಸುವುದು ಗುರುವಿನ ಒಂದು ವಾತ್ಸಲ್ಯ. ಶಿಷ್ಯಪ್ರಸಿದ್ಧಿಯನ್ನು ಬಯಸುವುದು ಮತ್ತೊಂದು. ಹೀಗಾಗಿ ಯಮನು ಆ ಅಗ್ನಿಗೆ ನಚಿಕೇತನ ಹೆಸರನ್ನೇ ದಾಖಲಿಸಿದನು.

ಅವನು ಧರ್ಮರಾಜ. ಪುಣ್ಯಪಾಪಗಳ ದಾಖಲಾತಿ ನಿರೀಕ್ಷಿಸುವವನು. ಅಂತಹವನು ನಚಿಕೇತನ ಹೆಸರನ್ನು ದಾಖಲಿಸಿದ ಎಂದರೆ ಶ್ರೋತೃಗಳು ವಿಷಯ ಸಂಗ್ರಹವನ್ನು ಕೇವಲ ಬುದ್ಧಿಯಲ್ಲಿ ದಾಖಲಿಸದೆ, ದಾಖಲೆ ನಿರ್ಮಿಸುವಂತೆ ಅದರ ಶ್ರವಣ ಮಾಡಬೇಕು.

ಅಗ್ನಿಯನ್ನು ಹೊತ್ತಿಸಿದವನು ಯಮನು. ಉಳಿಸಿದವನು ನಚಿಕೇತ. ಹೀಗಾಗಿ ಜ್ಞಾನಪರಂಪರೆಯ ಪ್ರವರ್ತನೆ ಬಹುಶ್ರೇಷ್ಠವಾದುದು.

ಸಾಮಾನ್ಯವಾಗಿ ವರ ಕೇಳುವವರು ಒತ್ತಾಯ ಮಾಡುತ್ತಾರೆ. ನೀಡುವವರು ನೀರಸವಾಗಿ ಪ್ರತಿಕ್ರಿಯಿಸುತ್ತಾರೆ. ಹೆಚ್ಚೆಂದರೆ ತಥಾಸ್ತು ಎಂದು ಹೇಳಿ ತಟಕ್ಕನೆ

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**



ಮರೆಯಾಗುತ್ತಾರೆ. ಆದರೆ ಇಲ್ಲಿ ಎಲ್ಲ ವಿಪರೀತ. ಯಮನೇ ವರ ಕೇಳು ಎಂದು ಒತ್ತಾಯಿಸುತ್ತಿದ್ದಾರೆ. ನಿಜವಾದ ಶಿಷ್ಯನಿಗೆ ವರ ಕೊಟ್ಟುದ್ದಲ್ಲದೆ ಮುಂದಿನ ವರ ಕೇಳು ಎಂದು ಒತ್ತಾಯಿಸುತ್ತಿದ್ದಾನೆ. ಇದಕ್ಕಾಗಿಯೇ 'ಅಧ್ಯಾತ್ಮ ವಿದ್ಯಾ ವಿದ್ಯಾನಾಂ' ಎನ್ನುವುದು 'ಗುರುಪ್ರಸಾದೋ ಬಲವಾನ್' ಎಂದೆನ್ನುವುದು.

ಯಮದೇವನು ಯಾರಿಗೂ ಕೂಡ ಕಾಯುವವನಲ್ಲ. ಇಲ್ಲಿ ನಚಿಕೇತನ ಮಾತಿಗಾಗಿ ಕಾಯುತ್ತಿದ್ದಾನೆ. ಕೇಳುತ್ತಿದ್ದಾನೆ. ಹೇಳುತ್ತಿದ್ದಾನೆ. ಎಂದರೆ ಜ್ಞಾನವು ಮಾತ್ರವೇ ಮೃತ್ಯುವನ್ನು ಕಾಯಬಲ್ಲದು, ಎದುರಿಸಬಲ್ಲದು, ಸೋಲಿಸಬಲ್ಲದು. ಯಮ ಮೃತ್ಯುವಾಗಿಲ್ಲದಿರಬಹುದು ನಚಿಕೇತನಿಗೆ. ಆದರೆ ಅಜ್ಞಾನದ ಅಂತಕನಾಗಿರುವುದು ಅಂತು ನೂರಕ್ಕೆ ನೂರರಷ್ಟೆ ನಿಜ ಅಲ್ಲವೆ?

**ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ**
**ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ।**
**ಏತದ್ ವಿದ್ಯಾಮನುಶಿಷ್ಟ ಸ್ತ್ವಯಾಽಹಂ**
**ವರಾಣಾಮೇಷ ವರಸ್ತೃತೀಯಃ ॥**

ಪ್ರೇತೇ-ಮೃತ ಪುರುಷನಲ್ಲಿ ಹಾಗೂ ಮುಕ್ತನಲ್ಲಿ ನಿಯಾಮಕನು ಎನಿಸಿ ಭಗವಂತನಿದ್ದಾನೆ ಎಂದು ಕೆಲವು ಜ್ಞಾನಿಗಳು ಹೇಳುತ್ತಾರೆ. ಇಲ್ಲ ಎಂದು ಅಜ್ಞಾನಿಗಳು ಹುಯಿಲೆಬ್ಬಿಸುತ್ತಾರೆ. ಇಂತಹ ಚರ್ಚೆ ಇದ್ದದ್ದೇ. ಮೃತ-ಮುಕ್ತ ನಿಯಾಮಕನಾದ ಭಗವಂತನನ್ನು ನಿನ್ನಿಂದ ಉಪದೇಶಿಸಿದಾಗ ನಾನು ತಿಳಿಯುವೆನು. ಇದೇ ನಿನ್ನಿಂದ ಬೇಡುವ ಮೂರನೆಯ ವರ.

ಉಪನಿಷತ್ತಿನ ಚಿಂತನೆಯಲ್ಲಿ ಇಲ್ಲೊಂದು ತೊಡಕು. ಸತ್ತನಂತರ ಜೀವನು ಇರುತ್ತಾನೋ ಇಲ್ಲವೋ ಎಂಬುದೇ ಪ್ರಶ್ನೆ. ಮುಕ್ತನ ಬಗೆಗೆ ಅಲ್ಲ. ಎಂಬುದು ಕೆಲವರ ವಾದ. ಪ್ರೇತ ಎಂಬ ಶಬ್ದವು ಮರಣಾ ನಂತರದ ಸ್ಥಿತಿವಾಚಕವೇ ಅಲ್ಲವೇ ಎಂಬುದು ಅವರ ತರ್ಕ. ಕೆಲವೊಮ್ಮೆ ಪದಗಳು ಇರುವ ಅರ್ಥ ಹೇಳುವುದಕ್ಕಿಂತ ತಲೆಯಲ್ಲಿರುವ ಅರ್ಥವನ್ನೇ ಎತ್ತಿ ತೋರಿಸುವುದುಂಟು. ಆಗ ಸಂವಾದ ವಿವಾದವಾಗುವ ಸಾಧ್ಯತೆಯೂ ಹೆಚ್ಚು.

(ಮುಂದುವರಿಯುವುದು)

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

**ಪುರಾಣ ಪರಿಚಯ** **ಭಾಗ-19**

# ಶ್ರೀವಿಷ್ಣುಪುರಾಣ

## ನಾನೇ ದೇವರೆಂಬ ವೇನ ನಾಶವಾದ

-ಸ್ಫೂರ್ತಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

ಧ್ರುವನ ವಂಶದಲ್ಲಿ 5-6 ತಲೆಮಾರು ದಾಟಿದ ಬಳಿಕ ಕುರುವಿನ ಮಗನಾಗಿ ಅಂಗ ಬಂದ. ಅಂಗ ಹಾಗೂ ಮೃತ್ಯುಪುತ್ರಿ ಸುನೀಥೆಯ ಮಗನಾಗಿ ವೇನ ಬಂದ. ಆತ ಅಜ್ಜನ (ತಾಯಿಯತಂದೆ) ದೋಷದಿಂದ ಸ್ವಾಭಾವಿಕವಾಗಿಯೇ ದುಷ್ಟನಾಗಿದ್ದ. ತಂದೆಯಾದ ಅಂಗನು ರಾಜ್ಯ ತ್ಯಾಗ ಮಾಡಿದ ಬಳಿಕ ಪರಮರ್ಷಿಗಳು ಸೇರಿ ಅವನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ರಾಜನಾದ ಕೂಡಲೆ ಅವನು 'ಯಾರೂ ಯಾಗ, ದಾನ, ಮುಂತಾದುವುಗಳನ್ನು ನಡೆಸಕೂಡದು. ನನಗಿಂತ ಬೇರಾವ ಯಜ್ಞಭೋಕ್ತೃವಿದ್ದಾನೆ. ನಾನೇ ಯಜ್ಞಪತಿಯಾದ ರಾಜ' ಎಂದು ಘೋಷಿಸಿದನು.

ಆಗ ಋಷಿಗಳೆಲ್ಲರೂ ಮೊದಲು ಆತನನ್ನು ರಾಜನೆಂದು ಗೌರವಿಸಿ ಬಳಿಕ- 'ಎಲೈ ರಾಜನೆ, ರಾಜ್ಯದ, ಪ್ರಜೆಗಳ ಒಳಿತಿಗಾಗಿ ಸರ್ವಯಜ್ಞೇಶ್ವರನಾದ ಶ್ರೀಹರಿಯನ್ನು ಬಹಳ ಕಾಲದವರೆಗೆ ಯಜ್ಞದಿಂದ ಆರಾಧಿಸುತ್ತೇವೆ. ನಿನಗೆ ಮಂಗಳವಾಗಲಿ. ಯಜ್ಞೇಶನಾದ ಶ್ರೀಹರಿಯು ಪ್ರೀತನಾದರೆ ನಮ್ಮ-ನಿನ್ನ ಎಲ್ಲ ಕಾಮನೆಗಳನ್ನು ಪೂರೈಸುತ್ತಾನೆ ' ಎಂದು ಹೇಳಿದರು. ಅದಕ್ಕೆ ಒಪ್ಪದ ವೇನನು 'ನನಗಿಂತ ಅಧಿಕರಾದವರು ಯಾರಿದ್ದಾರೆ? ನೀವು ಹೇಳಿದ ಯಜ್ಞೇಶ್ವರನಾದ ಹರಿ ಎಂದರೆ ಯಾರು? ಬ್ರಹ್ಮಾ, ವಿಷ್ಣು, ಮಹೇಶ್ವರ, ಇಂದ್ರ, ವಾಯು, ಯಮ, ಮುಂತಾದ ಎಲ್ಲ ದೇವತೆಗಳು ರಾಜನ ಶರೀರದಲ್ಲಿಯೇ ನೆಲೆಸಿರುತ್ತಾರೆ. ಆದ್ದರಿಂದ ರಾಜ ಸರ್ವದೇವಮಯನಾದವ. ಹೀಗೆ ತಿಳಿದು ನನ್ನಿಂದ ಆಜ್ಞಾಪಿಸಲ್ಪಟ್ಟಂತೆ ನಡೆಯಿರಿ. ಪತಿಯ ಶುಶ್ರೂಷೆ ಪತ್ನಿಗೆ ಹೇಗೆ ಧರ್ಮವೋ ಹಾಗೆಯೇ ರಾಜನ ಆಜ್ಞಾಪಾಲನೆ ನಿಮ್ಮೆಲ್ಲರ ಧರ್ಮ' ಎಂದು ಹೇಳಿದನು. ಋಷಿಗಳು ವೇನನನ್ನು ಮತ್ತಷ್ಟು ಒಪ್ಪಿಸುವ ಪ್ರಯತ್ನದಲ್ಲಿ ತೊಡಗಿ 'ಎಲೈ ರಾಜನು ಯಜ್ಞ ಮಾಡಲು ಅನುಮತಿಯನ್ನು ನೀಡು. ಧರ್ಮ ಎಂದಿಗೂ ನಾಶವಾಗದಿರಲಿ. ಈ ಎಲ್ಲ ಜಗತ್ತು ಯಜ್ಞದ ಪರಿಣಾಮವಾಗಿಯೇ ಉಳಿದಿದೆ ' ಎಂದು ಹೇಳಿದರು. ಹೀಗೆ ಮತ್ತೆ ಮತ್ತೆ

**ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.**



ವಿಜ್ಞಾಪಿಸಿಕೊಂಡರೂ ವೇನನು ಅನುಮತಿಯನ್ನು ನೀಡಲೇ ಇಲ್ಲ. ಇದರಿಂದ ಸಿಟ್ಟಿಗೆದ್ದ ಋಷಿಗಳು 'ಪಾಪಿಯಾದ ಇವನನ್ನು ಕೊಲ್ಲಿರಿ, ಕೊಲ್ಲಿರಿ' ಎಂದು ಪರಸ್ಪರವಾಗಿ ಮಾತಾಡಿಕೊಂಡರು. 'ಯಾರು ಯಜ್ಞಪುರುಷನಾದ, ಸಕಲ ಜಗತ್ತಿನ ಒಡೆಯನಾದ ಶ್ರೀಹರಿಯನ್ನು ನಿಂದಿಸುತ್ತಾನೋ ಅಂತಹ ಅಧಮಾಚಾರನು ಬದುಕಲು ಯೋಗ್ಯನಲ್ಲ' ಎಂದು ನಿಶ್ಚಯಿಸಿ ಮಂತ್ರಪೂತವಾದ ಕುಶದಿಂದ ಭಗವಂತನ ನಿಂದೆಯಿಂದ ಈಗಾಗಲೆ ದೈವದೃಷ್ಟಿಯಲ್ಲಿ ಮೃತನಾಗಿದ್ದ ವೇನನನ್ನು ಮನುಷ್ಯದೃಷ್ಟಿಯಿಂದಲೂ ಸಂಹರಿಸಿದರು.

ಬಳಿಕ ಋಷಿ-ಮುನಿಗಳು ಎಲ್ಲ ಕಡೆಯೂ ಎದ್ದ ಧೂಳಿಯನ್ನು ಕಂಡು ಏನೆಂದು ತಿಳಿಯದೆ ಪ್ರಜೆಗಳ ಬಳಿ ವಿಚಾರಿಸಿದರು. ರಾಷ್ಟ್ರದಲ್ಲಿ ರಾಜನಿಲ್ಲದೆ ಅರಾಜಕತೆ ಬಂದಿರುವುದರಿಂದ ಎಲ್ಲ ಕಡೆಯೂ ಕಳ್ಳತನ, ಸುಲಿಗೆ ಪ್ರಾರಂಭವಾಗಿದೆ. ಅವರ ಬೆಳವಣಿಗೆ ಬಹಳ ಹೆಚ್ಚಾಗಿ ಆ ಧೂಳಿಯು ಎಲ್ಲೆಡೆಯೂ ಕಾಣಿಸುತ್ತಿದೆ' ಎಂದು ಪ್ರಜೆಗಳು ಋಷಿಗಳಿಗೆ ವಿವರಿಸಿದರು.

ಆಗ ಎಲ್ಲ ಮುನಿಗಳು ಸಮಾಲೋಚಿಸಿ ಸಂತಾನವಿಲ್ಲದ ರಾಜನ ತೊಡೆಯನ್ನು ಪ್ರಯತ್ನಪೂರ್ವಕವಾಗಿ ಕಡೆದರು. ಹೀಗೆ ಕಡೆಯುತ್ತಿರುವಾಗ ಕಪ್ಪಗಿನ ಗಿಡ್ಡನಾದ, ಬೋಳುತಲೆಯ ಪುರುಷನೊಬ್ಬ ತೊಡೆಯಿಂದ ಮೇಲೆ ಬಂದು. 'ಏನು ಮಾಡೋಣ' ಎಂದು ಎಲ್ಲ ಬ್ರಾಹ್ಮಣರನ್ನು ಕೇಳಿದ. ಆ ಎಲ್ಲರೂ 'ಕುಳಿತುಕೋ (ನಿಷೀದ) ಎಂದು ಹೇಳಿದರು. ಆದ್ದರಿಂದ ಅವನು ನಿಷಾದನೆಂದೇ ಪ್ರಸಿದ್ಧನಾದ. ಅವನ ವಂಶ ನಿಷಾದ (ಬೇಡ) ವಂಶವಾಗಿ ಪಾಪಕರ್ಮದಲ್ಲಿ ನಿರತರಾದರು. ಅವನ ಮೂಲಕ ವೇನನ ಪಾಪ ಸಂಪೂರ್ಣ ಆ ದೇಹದಿಂದ ಹೊರ ಬಂತು.

ನಂತರ ವೇನನ ಬಲಕೈಯನ್ನು ಕಡೆದರು. ಆಗ ಅತ್ಯಂತ ಪ್ರತಾಪಿಯಾದ ಪೃಥುವು ಬೆಳಗುವ ಮೈಯುಳ್ಳವನಾಗಿ ಸಾಕ್ಷಾತ್ ಅಗ್ನಿಯಂತೆ ಜ್ವಲಿಸುತ್ತ ಮೇಲೆ ಬಂದನು. ಆಕಾಶದಿಂದ 'ಆಜಗವ' ಎಂಬ ಆದಿ ಕಾಲದಲ್ಲಿದ್ದ ಧನುಸ್ಸು ಬಂದು ಅವನ ಕೈ ಸೇರಿತು. ದಿವ್ಯವಾದ ಬಾಣಗಳು, ಕವಚ ಆಕಾಶದಿಂದ ಬಿದ್ದವು. ಅವನು ಜನಿಸಿ ಬರುತ್ತಿರಲು ಎಲ್ಲ ಕಡೆಯೂ ಸಂತೋಷದ ವಾತಾವರಣ ನಿರ್ಮಾಣವಾಯಿತು.

**ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.**

# ಯತಿ ಶ್ರೇಷ್ಠ
# ಶ್ರೀ ಶ್ರೀ ರಾಜರಾಜೇಶ್ವರ ತೀರ್ಥರು

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಪಲಿಮಾರುಮಠದ ಶ್ರೀಹೃಷೀಕೇಶತೀರ್ಥರ ಪರಂಪರೆಯಲ್ಲಿ ಆರನೇ ಯತಿಗಳಾಗಿ ವೇದಾಂತಸಾಮ್ರಾಜ್ಯವನ್ನು ಆಳಿದ ಶ್ರೀ ಶ್ರೀ ರಾಜರಾಜೇಶ್ವರ ತೀರ್ಥರು ಅಪ್ರತಿಮ ವಿದ್ವಾಂಸರು. ಇವರ ಗುರುಗಳಾದ ಶ್ರೀ ವಿದ್ಯಾಮೂರ್ತಿ ತೀರ್ಥರು ತಮ್ಮ ಗುರುಗಳಾದ ಶ್ರೀ ಅಪರಾಜಿತ ತೀರ್ಥರು ಪೀಠದಲ್ಲಿರುವಾಗಲೇ ಆಶ್ರಮವನ್ನು ನೀಡಿದರು. ಗುರುಗಳ ಆದೇಶದಂತೆ ಪರಮಗುರುಗಳಾದ ಶ್ರೀ ಅಪರಾಜಿತ ತೀರ್ಥರ ಗರಡಿಯಲ್ಲಿ ತಯಾರಾಗಿ ಗುರು–ಪರಮಗುರುಗಳ ಕೀರ್ತಿಗೆ ಒಪ್ಪಕೊಡುವ ಸಹಜ ಪಾಂಡಿತ್ಯವನ್ನು ಪಡೆದವರು ಶ್ರೀ ರಾಜರಾಜೇಶ್ವರ ತೀರ್ಥರು ಮುಂಜಾವಿನಲ್ಲಿ–ಮಂಗಳಕಾರ್ಯಗಳಲ್ಲಿ ಪಠಿಸುವ "ಲಕ್ಷ್ಮೀರ್ಯಸ್ಯ ಪರಿಗ್ರಹ ......." ಎಂದು ಆರಂಭವಾಗುವ ಮಂತ್ರತುಲ್ಯವಾದ ಮಂಗಳಾಷ್ಟಕವನ್ನು ರಚಿಸಿರುವ ಕಾವ್ಯ ಋಷಿಗಳು. ಕಾಳಿದಾಸನ ಮೇಘಸಂದೇಶ, ವೇದಾಂತದೇಶಿಕರ ಹಂಸ ಸಂದೇಶದಂತೆ ರಾಮಸಂದೇಶ ಎನ್ನುವ ಅದ್ಭುತ ಕಾವ್ಯವನ್ನು ರಚಿಸಿದರು. ಮೇಘಸಂದೇಶದಲ್ಲಿ ಕಾಳಿದಾಸನು ಮೇಘರಾಜನ ಮೂಲಕ ತನ್ನ ಜನ್ಮಭೂಮಿಯಾದ ಉಜ್ಜೈನಿಯ ವರ್ಣನೆಯನ್ನು ಮಾಡಿಸುತ್ತಾನೋ ಅದೇ ರೀತಿ ರಾಮಾಯಣದ ಸುಂದರಕಾಂಡದ ಘಟ್ಟದಲ್ಲಿ ಅಶೋಕವನದಲ್ಲಿರುವ ಸೀತಾದೇವಿಗೆ ರಾಮನ ದಿವ್ಯಸಂದೇಶವನ್ನು ನೀಡುವುದರೊಂದಿಗೆ ತಮ್ಮ ಜನ್ಮಭೂಮಿಯಾದ ತುಳುನಾಡಿನ ಪ್ರಾಕೃತಿಕಸೌಂದರ್ಯದ ವಿವರಣೆಯನ್ನೂ ಆಂಜನೇಯನ ಮೂಲಕ ಈ ರಾಮಸಂದೇಶ ಕಾವ್ಯದಲ್ಲಿ ನೀಡಿದ್ದಾರೆ. ರಾವಣನಿಗೆ ಹನುಮಂತನು ತನ್ನ ಪರಿಚಯವನ್ನು ಮಾಡಿಸುವ ಘಟ್ಟವು ಈ ಕಾವ್ಯದಲ್ಲಿ ಸೊಗಸಾಗಿ ಮೂಡಿಬಂದಿದೆ. ಕಾವ್ಯಸಾಗರದಲ್ಲಿ ಲೀಲಾಜಾಲವಾಗಿ ಈಜಾಡಿದ ಶ್ರೀರಾಜರಾಜೇಶ್ವರತೀರ್ಥರು ನ್ಯಾಯಶಾಸ್ತ್ರಗಳಲ್ಲಿಯೂ ಎದುರಿಲ್ಲದ ಪಂಡಿತರು. ಪುಟ್ಟ ಯತಿಗಳ ಈ ಶ್ರೇಷ್ಠ ವಿದ್ವತ್ತು–ಕವಿತ್ವಗಳಿಗೆ ತಲೆದೂಗಿ ಆ ಕಾಲದ ಅನೇಕ ರಾಜರುಗಳು ಸತ್ಕರಿಸಿ ಹಲವಾರು ಜಹಗೀರುಗಳನ್ನು ಶ್ರೀಮಠಕ್ಕೆ ಅರ್ಪಿಸಿರುವುದು ಶಾಸನಗಳಿಂದ ದಾಖಲಾಗಿದೆ.

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.



ಆ ಮಠದ ಸಂಪತ್ತಿನ ಅರ್ಧಾಂಶವು ಶ್ರೀರಾಜರಾಜೇಶ್ವರತೀರ್ಥರ ಪ್ರತಿಭೆಯ ಫಲವಾಗಿದೆ. ಅದಕ್ಕೊಂದು ಪುಟ್ಟ ದೃಷ್ಟಾಂತ ಕಾಂತವರದ ಶ್ರೀ ಪಲಿಮಾರು ಮಠ.

ಪಟ್ಟವನ್ನೇರುವ ಮುಂಚೆಯೇ ಗುರುಗಳ ಸನ್ನಿಧಿಯಲ್ಲಿ ಬೌದ್ಧಿಕ ಹಾಗೂ ಭೌತಿಕ ಸಂಪತ್ತನ್ನು ಶ್ರೀರಾಮನಿಗೆ ಅರ್ಪಿಸಿ ಅತೀ ಕಿರಿಯ ವಯಸ್ಸಿನಲ್ಲೇ ಶ್ರೀಹರಿಯ ಪಾದವನ್ನು ಸೇರಿದರು ಅವರು ಅತಿ ಅಕಾಲದಲ್ಲೇ ಸಮಾಜದಿಂದ ದೂರವಾದರೂ ಅವರ ಕೃತಿಗಳು ಮಾತ್ರ ಇನ್ನೂ ಅಜರಾಮರವಾಗಿವೆ ಅವರ ವೃಂದಾವನ ಪಲಿಮಾರುಗ್ರಾಮದ ಶ್ರೀಮಠದ ಪವಿತ್ರ ಪರಿಸರದಲ್ಲಿದೆ. ಆದರೆ ಶ್ರೀರಾಜರಾಜೇಶ್ವರತೀರ್ಥರು ವೃಂದಾವನವಾದ ದಿನದ ದಾಖಲೆ ದೊರೆತಿಲ್ಲವೆಂಬುದು ಸಮಾಜದ ದುರದೃಷ್ಟ ಸಂಗತಿ. ಇತ್ತೀಚಿನ ಕೆಲವು ವರ್ಷಗಳಿಂದ ಚೈತ್ರ ಮಾಸದ ಹುಣ್ಣಿಮೆಯು ಅವರ ಪುಣ್ಯದಿನವೆಂದು ಗುರುತಿಸಿ ಅಂದು ಶ್ರೀರಾಜರಾಜೇಶ್ವರತೀರ್ಥರ ಆರಾಧನಾ ಮಹೋತ್ಸವನ್ನು ಆಚರಿಸುವ ಸಂಕಲ್ಪವನ್ನು ಶ್ರೀಪಾದರು ಕೈಗೊಂಡಿದ್ದಾರೆ. ಇದಕ್ಕೆ ಪೂರಕವಾದ ಕೆಲವು ಸೂಚನೆಗಳು ಶ್ರೀಪಾದರಿಗೆ ಕಂಡುಬಂದಿತ್ತು.

ಇಂತಹ ಗುರುಗಳ ನೆನಪಿಗಾಗಿ ಶ್ರೀರಾಜರಾಜೇಶ್ವರ ಪ್ರಶಸ್ತಿಯನ್ನು ನೀಡುವ ಸಂಕಲ್ಪವನ್ನು ಕೈಗೊಂಡಿದ್ದಾರೆ. ಪಾಠ ಪ್ರವಚನವನ್ನು ನಡೆಸುತ್ತಾ ನಮ್ಮ ಸಮಾಜದ ಸೇವೆ ಸಲ್ಲಿಸುತ್ತಾ ಎಲೆಮರೆಕಾಯಿಯಂತೆ ಇರುವ ಹಿರಿಯ ವಿದ್ವಾಂಸರಿಗೆ ಅಥವಾ ಸದನುಷ್ಠಾನನಿರತರಾಗಿ ಸಸ್ಸಿದ್ಧಾಂತಕನುಗುಣವಾಗಿ ಪೌರೋಹಿತ್ಯನಡೆಸುತ್ತಾ ಸಮಾಜದ ಔನ್ನತ್ಯವನ್ನು ಬಯಸುವ ಪುರೋಹಿತರಿಗೆ ಕಳೆದ ಹತ್ತು–ಹನ್ನೆರಡು ವರ್ಷಗಳಿಂದ ಶ್ರೀಪಾದರು ಈಪ್ರಶಸ್ತಿಯನ್ನು ನೀಡುತ್ತಿದ್ದಾರೆ.

ಈವರೆಗೆ ಪ್ರಶಸ್ತಿಯನ್ನು ಪಡೆದ ವಿದ್ವಾಂಸರುಗಳು:–

| | | |
|---|---|---|
| 1. | ವಿ॥ ವಟ್ಟಂಗಾಡು ಹಯಗ್ರೀವ ಆಚಾರ್ಯ ಬೆಂಗಳೂರು | |
| 2. | ವಿ॥ ಕಾಪು ಹಯಗ್ರೀವ ಆಚಾರ್ಯ | ಉಡುಪಿ |
| 3. | ವಿ॥ ಕೃಷ್ಣ ಉಪಾಧ್ಯಾಯ | ಕುಂಭಾಸಿ |
| 4. | ವಿ॥ ಪಾದೂರು ವೆಂಕಟರಮಣ ಐತಾಳ | ಉಡುಪಿ |
| 5. | ವಿ॥ ಪಡುಬಿದ್ರೆ ಅನಂತ ಪದ್ಮನಾಭಚಾರ್ಯ | ಬೆಂಗಳೂರು |
| 6. | ವಿ॥ ಅಂಗಡಿಮಾರು ಕೃಷ್ಣಭಟ್ | |
| 7. | ವಿ॥ ಭೀಮಸೇನ ವರಖೇಡಿ | ಪಂಡರಾಪುರ |

ದೀನ–ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

8. ವಿ॥ ಕಲ್ಮಂಜೆ ಗೋಪಾಲಕೃಷ್ಣ ಉಪಾಧ್ಯಾಯ ಉಡುಪಿ
9. ವಿ॥ ಚಿತ್ರಾಪುರ ಗೋಪಾಲಕೃಷ್ಣ ಆಚಾರ್ಯ
10. ವಿ॥ ಅನಂತ ಭಟ್ ಕೊಯಮತ್ತೂರು
11. ವಿ॥ ಕೋಣಂದೂರು ಗೋಪಾಲಕೃಷ್ಣ ಆಚಾರ್ಯ ಕಾರ್ಕಳ
12. ವಿ॥ ಕಲ್ಯ ಗೋಪಾಲ ಭಟ್ ಕಾಪು

ಈ ಸಲದ ರಾಜರಾಜೇಶ್ವರ ಪ್ರಶಸ್ತಿಯನ್ನು ಪ್ರಸಿದ್ದ ಜ್ಯೋತಿಷ್ಯ್ಕರಾದ ವಿ॥ ಬೈಲೂರು ಪದ್ಮನಾಭ ತಂತ್ರಿಗಳಿಗೆ ನೀಡಲಾಗುತ್ತಿದೆ. ಶ್ರೀ ಲಕ್ಷ್ಮೀನಾರಾಯಣ ತಂತ್ರಿ ಮತ್ತು ಶ್ರೀಮತಿ ಸರಸ್ವತಿ ಅಮ್ಮನವರ ಏಕೈವ ಪುತ್ರ.ರಾಗಿರುವ ಶ್ರೀಯುತರು, ಚಿಕ್ಕವಯಸ್ಸಿನಲ್ಲೇ ಸಂಸ್ಕೃತಾಧ್ಯಯನ–ಋಗ್ವೇದ–ಪೌರೋಹಿತ್ಯ–ಜ್ಯೋತಿಷ್ಯದ ಅಭ್ಯಾಸವನ್ನು ನಡೆಸಿ, ಜ್ಯೋತಿಷ್ಯ ಶಿರೋಮಣಿಗಳಾದ ಎಂ. ಭೀಮಾಚಾರ್ಯರಿಂದ ಜ್ಯೋತಿಷ್ಯಶಾಸ್ತ್ರದ ಮರ್ಮವನ್ನು ತಿಳಿದು ಹೋರಾಶಾಸ್ತ್ರ, ಕೃಷ್ಣೀಯ, ಪ್ರಶ್ನೆಮಾರ್ಗವೇ ಮೊದಲಾದ ಜ್ಯೋತಿಶ್ಶಾಸ್ತ್ರಗ್ರಂಥಗಳನ್ನು ಕಂಠಸ್ಥೀಕರಣ ಮಾಡಿ, ಗುರುದಕ್ಷಿಣೆಯಾಗಿ ಅವರು ಉಡುಪಿಯಲ್ಲಿ ಹುಟ್ಟುಹಾಕಿರುವ ಜ್ಯೋತಿರ್ಮಂದಿರದ ಜವಾಬ್ದಾರಿಯನ್ನು ಹೊತ್ತು, ಆ ಸಂಸ್ಥೆಯ ಮೂಲಕ ಜ್ಯೋತಿರ್ವಿದ್ಯಾದಾನವನ್ನು ಮಾಡಿ ಹಲವಾರು ಜ್ಯೋತಿಃಶಾಸ್ತ್ರಪಂಡಿತರನ್ನು ಸಮಾಜಕ್ಕೆ ನೀಡಿ, ಹಲವಾರು ಸಂಘ ಸಂಸ್ಥೆಗಳ ಸನ್ಮಾನಗಳಿಗೆ ಭಾಜನರಾಗಿರುವ ಇವರು 2002–04ಶ್ರೀ ಪಲಿಮಾರು ಪರ್ಯಾಯದಲ್ಲಿ ಶ್ರೀ ಶ್ರೀ ವಿದ್ಯಾಧೀಶತೀರ್ಥರಿಂದ 'ಆಸ್ಥಾನವಿದ್ವಾನ್' ಎಂದು ಘೋಷಿಸಿ "ಜ್ಯೋತಿರ್ನಿಧಿ" ಎಂಬ ಪ್ರಶಸ್ತಿ ಪಡೆದಿರುವ ಪದ್ಮನಾಭ ತಂತ್ರಿಗಳಿಗೆ ಎಂಬತ್ತರ ಇಳಿವಯಸ್ಸಿನಲ್ಲೂ ಅಧ್ಯಾಪನದ ಆಸಕ್ತಿ ಕುಂದಿಲ್ಲ. ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಎರಡನೇ ಪರ್ಯಾಯ ಕಾಲದಲ್ಲಿ ಪರಮ ಪೂಜ್ಯ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರಿಗೂ ಜ್ಯೋತಿಷ್ಯ ಪಾಠವನ್ನು ಹೇಳಿ ತಮ್ಮ ಆತನಕದ ಅಧ್ಯಯನ–ಅಧ್ಯಾಪನವನ್ನು ಶ್ರೀಕೃಷ್ಣನಿಗೆ ಸಮರ್ಪಿಸಿರುವರು. "ಸರ್ವೇ ಶಿಷ್ಯಾಃ ಸತ್ಯವತೀ ಸುತಸ್ಯ" ಎಂಬ ಮಾತಿನಂತೆ ಉಡುಪಿ ಪರಿಸರದ ಈಗಿನ ಎಲ್ಲಾ ಪ್ರಸಿದ್ಧ ಜ್ಯೋತಿಷ್ಯರುಗಳು ಇವರ ಶಿಷ್ಯರಾಗಿದ್ದಾರೆ.

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,



## ಉಡುಪಿ ಪಲಿಮಾರುಮಠದಲ್ಲಿ ಬಾಲಕ–ಬಾಲಕಿಯರಿಗೆ ಧಾರ್ಮಿಕ–ಆಧ್ಯಾತ್ಮಿಕ ಶಿಕ್ಷಣ ಶಿಬಿರ

ಪ್ರತಿವರ್ಷದಂತೆ ಈ ಬಾರಿಯೂ ಏಪ್ರಿಲ್ 7ರಿಂದ 22ರವರೆಗೆ ಉಡುಪಿ ಪಲಿಮಾರು ಮಠದಲ್ಲಿ ಬಾಲಕ–ಬಾಲಕಿಯರಿಗಾಗಿ ಧಾರ್ಮಿಕ–ಆಧ್ಯಾತ್ಮಿಕ ಶಿಕ್ಷಣ ಶಿಬಿರವು ನಡೆಯಲಿದೆ. ಪ್ರತಿದಿನ ಅಪರಾಹ್ಣ 2–45ರಿಂದ 6–15ರವರೆಗೆ ನಡೆಯಲಿರುವ ಈ ಶಿಬಿರದಲ್ಲಿ 6–9 ವರ್ಷದ ಅನುಪನೀತ ವಟುಗಳಿಗೆ ಸ್ತೋತ್ರ, ಪದ್ಯ ಹಾಗೂ ಕೆಲವು ಧಾರ್ಮಿಕ ಚಟುವಟಿಕೆಗಳನ್ನು, ಉಪನೀತವಟುಗಳಿಗೆ ಜಪ, ಪೂಜೆ, ಬ್ರಹ್ಮಯಜ್ಞ, ಬ್ರಾಹ್ಮಣಾರಾಧನೆ, ಕಲ್ಪೋಕ್ತಪೂಜೆ, ಪಂಚಗವ್ಯಮೇಲನ ಮುಂತಾದ ಧಾರ್ಮಿಕ ವಿಧಿಗಳನ್ನು, ಪುರುಷಸೂಕ್ತ, ಶ್ರೀಸೂಕ್ತ, ಪವಮಾನ, ರುದ್ರಾಧ್ಯಾಯ ಮುಂತಾದ ವೇದಭಾಗಗಳನ್ನೂ, ವಿಷ್ಣುಸಹಸ್ರನಾಮ, ಹರಿವಾಯುಸ್ತುತಿ ಮುಂತಾದ ಅನೇಕ ಸ್ತೋತ್ರಗಳನ್ನು ಆರುವರ್ಷಗಳ ಶಿಬಿರದ ಅವಧಿಯಲ್ಲಿ ಬೋಧಿಸಲಾಗುತ್ತದೆ.

ಹತ್ತು ವರ್ಷ ಮೇಲ್ಪಟ್ಟ ಬಾಲಕಿಯರಿಗೆ ಲಕ್ಷ್ಮೀಶೋಭಾನೆ, ಹರಿದಾಸರ ಕೀರ್ತನೆಗಳು, ಹರಿಕಥಾಮೃತಸಾರ, ವಿವಿಧ ಸ್ತೋತ್ರಗಳು, ಬಗೆಬಗೆಯಿಂದ ಹೂಕಟ್ಟುವುದು, ರಂಗೋಲಿ ಬಿಡಿಸುವುದು ಮುಂತಾದ ಪ್ರಾಚೀನ ಕಲೆಗಳನ್ನು, ಸಂಪ್ರದಾಯಗಳನ್ನು, ಮಾನಸಿಕ ಸ್ಥೈರ್ಯಕ್ಕೆ ಉಪಯುಕ್ತವಾದ ವಿಷಯಗಳನ್ನು ಐದು ವರ್ಷಗಳ ಶಿಬಿರದಲ್ಲಿ ಬೋಧಿಸಲಾಗುತ್ತದೆ.

ಪರಊರಿನ ಉಪನೀತ ವಟುಗಳಿಗೆ ವಸತಿ ವ್ಯವಸ್ಥೆಯೂ ಇದ್ದು ದಿನದ ಪೂರ್ವಾರ್ಧದಲ್ಲಿಯೂ ಪಾಠದ ವ್ಯವಸ್ಥೆ ಇರುತ್ತದೆ.

ಆಸಕ್ತರು ಏಪ್ರಿಲ್ 5 ರ ಒಳಗಾಗಿ **ವ್ಯವಸ್ಥಾಪಕರು, ಪಲಿಮಾರು ಮಠ, ಉಡುಪಿ.**

**ದೂರವಾಣಿ ಸಂಖ್ಯೆ: 2523402** ಇವರಲ್ಲಿ ವಿಚಾರಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.

# ಪಾವನಂ ವಿಷ್ಣುನೈವೇದ್ಯಂ

ಸಂಗ್ರಹ –ಸಗ್ರಿ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಪಾವನಂ ವಿಷ್ಣುನೈವೇದ್ಯಂ ಸುಭೋಜ್ಯಂ ಋಷಿಭಿಃ ಸ್ಮೃತಮ್।
ಅನ್ಯದೇವಸ್ಯ ನೈವೇದ್ಯಂ ಭುಕ್ತ್ವಾ ಚಾಂದ್ರಾಯಣಂ ಚರೇತ್॥

ಮಾನವನು ಸ್ವೀಕರಿಸುವ ಅಹಾರವು ಸಸ್ಯಾಹಾರವೇ ಆಗಿದ್ದರೂ ಅದು ಸಾಮಾನ್ಯವಾಗಿ ಹಿಂಸಾಯುಕ್ತವಾಗಿಯೇ ಇರುತ್ತದೆ. ದವಸಧಾನ್ಯ, ಗೆಡ್ಡೆಗೆಣಸು ಇವುಗಳನ್ನಷ್ಟೇ ತಿಂದು, ನೀರು ಕುಡಿಯುವುದಾದರೂ ಅನೇಕ ಜೀವರಾಶಿಗಳ ಹಿಂಸೆ ನಡೆದೇ ತೀರುವುದು. ಈ ಬಗೆಯ ಹಿಂಸೆಯಿಂದ ಪಾಪ ಉಂಟಾಗಬಾರದೆಂದು ಆಹಾರವನ್ನು ಸ್ವೀಕರಿಸುವಾಗ ಈ ಆಹಾರ ಮುಖ್ಯವಾಗಿ ಭಗವಂತನ ಸಮರ್ಪಣೆಗಾಗಿ ರಚಿತವಾದದ್ದು ಅವನಿಗೆ ಸಮರ್ಪಿತವಾಗಿ ಉಳಿದ ಭಾಗವನ್ನು ತಾನು ಉಣ್ಣುತ್ತಿರುವುದು ಎಂಬ ಅನುಸಂಧಾನವಿರಬೇಕು. ಭಗವಂತನಿಗೆ ಸಮರ್ಪಣೆ ಎಂದರೆ ಅದೊಂದು ಹಿಂಸೆ ಪಾಪಸಾಧನವಲ್ಲ. ಆದ್ದರಿಂದ ಭಗವಂತನಿಗಾಗಿ ಸಮರ್ಪಿಸಬೇಕಾದ ಯಜ್ಞಕ್ಕಾಗಿ ಕೈಗೊಳ್ಳಬೇಕಾದ ಹಿಂಸೆ ದೋಷವೆನಿಸದ ಪ್ರಯುಕ್ತ, ಆ ಉದ್ದೇಶವನ್ನಿಟ್ಟುಕೊಂಡು ರಚಿಸಿರುವ ಆಹಾರ ಪಾಪಾತ್ಮಕ ಹಿಂಸಾಯುಕ್ತವೆನಿಸದು. ಭಗವಂತನಿಗೆ ಸಮರ್ಪಿಸಿ, ಉಳಿದ ಅಹಾರವನ್ನು ಸೇವಿಸುವುದೆಂದರೆ ಯಜ್ಞಶೇಷಸ್ವೀಕಾರ ಎನಿಸಬಲ್ಲದು. ಇದು ಪಾಪಸಾಧನವಾಗದಿರುವುದಷ್ಟೇ ಅಲ್ಲದೆ ಪಾಪಪರಿಹಾರಕವೂ ಆಗಬಲ್ಲದು.

"ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ– ಎಂಬುದಾಗಿ ಗೀತಾಚಾರ್ಯ ಯಜ್ಞಶೇಷಸ್ವೀಕಾರ ಸರ್ವಪಾಪಪರಿಹಾರಕವಾಗುವುದೆಂದು ಸಂದೇಶಿಸಿರುವರು. ಆದ್ದರಿಂದಲೇ ಭಗವಂತನಿಗೆ ಸಮರ್ಪಿತವಾದ ನೈವೇದ್ಯವು ಸುಭೋಜ್ಯ ಎಂದರೆ ಉಣ್ಣಲು ಯೋಗ್ಯವಾದುದು ಎಂದು ಋಷಿಗಳು, ಜ್ಞಾನಿಗಳು ಸಿದ್ಧಾಂತಿಸಿರುವರು. ಉದ್ಧವ ಈ ಅಭಿಪ್ರಾಯದಲ್ಲಿಯೇ ಶ್ರೀಕೃಷ್ಣನಲ್ಲಿ ಹೀಗೆ ನಿವೇದಿಸಿಕೊಂಡಿರುವನು–

ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ।
ಉಚ್ಛಿಷ್ಟಭೋಜಿನೋ ದಾಸಾಃ ತವ ಮಯಾಂ ಜಯೇಮಹಿ॥

ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.



ನೀನು ಅನುಭವಿಸಿ ಉಳಿದ ಮಾಲೆ, ಗಂಧ, ಉಡುಪು, ಅಲಂಕಾರ– ಇವುಗಳನ್ನು ಧರಿಸಿಕೊಂಡು ನಿನ್ನ ನೈವೇದ್ಯವನ್ನು ಉಂಡ ನಿನ್ನ ದಾಸರು ಪ್ರಕೃತಿಯ ಬಂಧನವನ್ನು ದಾಟುವರು.

ಪ್ರಕೃತಿಯ ಬಂಧನವನ್ನು ಅತಿಕ್ರಮಿಸಲು ಬೇಕಾದ ಪಾವಿತ್ರ್ಯವನ್ನು ನೀಡುವ ಸಾಮರ್ಥ್ಯ ಭಗವಂತನ ನೈವೇದ್ಯದಲ್ಲಿ ಇದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಇತರ ದೇವತೆಗಳ ನೈವೇದ್ಯ ಅಗ್ರಾಹ್ಯ

ಹೀಗೆ ಪೂರ್ವಾರ್ಧದಲ್ಲಿ ಭಗವದರ್ಪಿತ ನೈವೇದ್ಯವನ್ನು ಅವಶ್ಯವಾಗಿ ಸ್ವೀಕರಿಸಬೇಕೆಂದು ತಿಳಿಸುತ್ತಿರುವ ಪ್ರಮಾಣ, ತನ್ನ ಉತ್ತರಾರ್ಧದಲ್ಲಿ ಇತರ ದೇವತೆಗಳಿಗರ್ಪಿಸಿದ ನೈವೇದ್ಯವನ್ನು ಸ್ವೀಕರಿಸಬಾರದು. ಹಾಗೆಲ್ಲಾದರೂ ಸ್ವೀಕರಿಸಿದರೆ ಮಹಾಪಾಪ ಸಂಭವಿಸುವುದು. ಅದರ ಪರಿಹಾರಕ್ಕಾಗಿ ಚಂದ್ರಾಯಣ ವ್ರತವನ್ನು ಆಚರಿಸಬೇಕೆಂದು ಎಚ್ಚರಿಸಿದೆ– " ಅನ್ಯದೇವಸ್ಯ ನೈವೇದ್ಯಂ ಭುಕ್ತ್ವಾಚಾಂದ್ರಾಯಣಂ ಚರೇತ್" ಎಂದು.

**'ಪರಶುಕ್ಲತ್ರಯ'**ರ ನೈವೇದ್ಯ ಗ್ರಾಹ್ಯ

ಸರ್ವಂ ಸ ಪೂತಮಶ್ನಾತಿ ಸ್ವದಿತಂ ಮಾತರಿಶ್ವನಾ' (9–67–31) ಎಂದು ಋಗ್ವೇದದಲ್ಲಿ ವಾಯುದೇವನಿಂದ ಭುಕ್ತವಾದದ್ದೂ ಪವಿತ್ರವಾದುದೆಂದು ಸೂಚಿಸಲ್ಪಟ್ಟಿದೆ. ಆದ್ದರಿಂದ ಈ ಪ್ರಮಾಣಕ್ಕೆ ಅನುಗುಣವಾಗಿ 'ಅನ್ಯದೇವಸ್ಯ' ಎಂಬಲ್ಲಿ ವಾಯುದೇವನಿಗಿಂತ ಇತರ ದೇವತೆಗಳ ನೈವೇದ್ಯದ ಸ್ವೀಕಾರವನ್ನಷ್ಟೇ ನಿಷೇಧಿಸಲಾಗಿದೆ ಎಂದು ಅರ್ಥೈಸಿಕೊಳ್ಳಬೇಕು.

ಈ ರೀತಿಯ ಅರ್ಥದ ಸೂಚನೆಗಾಗಿಯೇ ಎಂಬಂತೆ ಆ ಪ್ರಮಾಣದ ಪೂರ್ವಾರ್ಧದಲ್ಲಿ ಪಾವನಂ ವಿಷ್ಣುನೈವೇದ್ಯಂ ಸುಭೋಜ್ಯಂ....' ಎಂದು ಭಗವಂತನ ನೈವೇದ್ಯಕ್ಕೆ ಪಾವನ ಎಂಬ ವಿಶೇಷಣವನ್ನು ನೀಡಲಾಗಿದೆ. ಪಾವನ ಎಂದರೆ ಪವಿತ್ರ ಎಂಬ ಅರ್ಥದಂತೆಯೇ ಪವನ ಎನಿಸುವ ವಾಯುದೇವನಿಗೆ ಸಂಬಂಧಿಸಿದುದು (ಪವನಸ್ಯೇದಂ ಪಾವನಂ) ಎಂಬ ಅರ್ಥವೂ ಹೊರಡಬಲ್ಲದು. ಆದುದರಿಂದ ಭಗವಂತನಿಗೆ ಅರ್ಪಿಸಿದ ನೈವೇದ್ಯವನ್ನು ವಾಯುದೇವನಿಗೂ ಸಮರ್ಪಿಸಿದಾಗ ಅದು 'ಸುಭೋಜ್ಯ' ಎನಿಸುವುದೆಂದು ಫಲಿಸುವುದು.

ಬರೇ ವಾಯುದೇವನಿಗಷ್ಟೇ ಅಲ್ಲ, ಅವನ ಸ್ವಭಾವದ ಸಾಮ್ಯವಿರುವ ಲಕ್ಷ್ಮೀದೇವಿ, ಚತುರ್ಮುಖ, ಸರಸ್ವತಿ ಹಾಗೂ ಭಾರತಿ– ಇವರಿಗೂ ಸಮರ್ಪಿತವಾದ

ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.

# ಬ್ರಾಹ್ಮಣ ಸಮಾಜದ ಅವಗಾಹನೆಗೆ

ವಿಜಯಧ್ವಜ ಜ್ಞಾನಪೀಠದ ಅಂಗಸಂಸ್ಥೆ ಪ್ರಹ್ಲಾದ ಗುರುಕುಲ. ಇದು ಬ್ರಾಹ್ಮಣ ಸಮಾಜಕ್ಕಾಗಿ ಶ್ರೀ ಶ್ರೀ ವಿಶ್ವೇಶತೀರ್ಥಶ್ರೀಪಾದರ ಮಾರ್ಗದರ್ಶನದಲ್ಲಿ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರಿಂದ ನಿರ್ಮಾಣಗೊಂಡ ಶಿಕ್ಷಣ ಸಂಸ್ಥೆ. ಕರ್ನಾಟಕ ಸರಕಾರದ ಸಾರ್ವಜನಕ ಶಿಕ್ಷಣ ಇಲಾಖೆಯ ಮಾನ್ಯತೆ ಪಡೆದಿರುವ ಈ ಗುರುಕುಲವು 1ನೇ ತರಗತಿಯಿಂದ 7ನೇ ತರಗತಿಯವರೆಗೂ ರಾಜ್ಯ ಸಾರ್ವಜನಕ ಶಿಕ್ಷಣ ಇಲಾಖೆಯ ಪಠ್ಯಕ್ರಮವನ್ನೇ ಅನುಸರಿಸುತ್ತಿದೆ. ಇಷ್ಟು ಮಾತ್ರವಲ್ಲದೇ ವಿಶೇಷವಾಗಿ 1ನೇ ತರಗತಿಯಿಂದಲೇ ಇಂಗ್ಲೀಷ್, ಸಂಸ್ಕೃತ ಭಾಷಾ ಶಿಕ್ಷಣ, ವೇದಾಂತ, ಸ್ತೋತ್ರ, ಸೂಕ್ತ, ವೇದಗಳ ಪಾಠ ಹಾಗೂ ಕಂಪ್ಯೂಟರ್ ಶಿಕ್ಷಣವೂ ನಡೆಯುತ್ತಿದೆ. ಜೊತೆಗೆ ನಮ್ಮ ಸಂಸ್ಕೃತಿ, ಆಚಾರ-ವಿಚಾರ, ಭಜನೆ, ಸಂಗೀತ, ಈಜು, ಯಕ್ಷಗಾನ ಮುಂತಾದ ಉತ್ತಮ ಚಟುವಟಿಕೆಗಳೂ ನಡೆಯುತ್ತಿದೆ.

ಶಿಕ್ಷಣ, ಊಟ, ವಸತಿ ಮುಂತಾದ ಎಲ್ಲಾ ಸೌಕರ್ಯಗಳನ್ನೂ ಉಚಿತವಾಗಿ ನೀಡುವ ಈ ಶಿಕ್ಷಣ ನಿಜವಾದ ಅರ್ಥದಲ್ಲಿ 'ವಿದ್ಯಾದಾನ'. ಸಮರ್ಥರಾದ ತರಬೇತಿ ಪಡೆದ, ವಿಶೇಷ ಅನುಭವವಿರುವ ಅನೇಕ ಶಿಕ್ಷಕ-ಶಿಕ್ಷಕಿಯರೂ, ವಿದ್ಯಾರ್ಥಿ-ಪಾಲಕರೂ (ವಾರ್ಡನ್) ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸುಸಜ್ಜಿತವಾದ ವಸತಿ ವ್ಯವಸ್ಥೆ ಇದ್ದು, ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನೂ ಈ ಗುರುಕುಲವು ಹೊಂದಿದೆ. ಧರ್ಮ, ಸಂಸ್ಕೃತಿ, ಆಚಾರ-ವಿಚಾರಗಳು ನಾಶವಾಗುತ್ತಿರುವ ಈ ಕಾಲದಲ್ಲಿ ಇಂತಹ ಗುರುಕುಲವು ಪ್ರಮುಖ ಅವಶ್ಯಕತೆಗಳಲ್ಲಿ ಒಂದು.

ಶ್ರೀಪೇಜಾವರ ಮಠದ ಶ್ರೀಪಾದಂಗಳವರು ವಿಶೇಷ ಮುತುವರ್ಜಿಯಿಂದ ಬ್ರಾಹ್ಮಣ ಸಮಾಜದ ಹಿತದೃಷ್ಟಿಯಿಂದ ಈ ಗುರುಕುಲವನ್ನು ಸ್ಥಾಪಿಸಿ ಬೆಳೆಸುತ್ತಿದ್ದಾರೆ. ಇದನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವುದಷ್ಟೇ ಬ್ರಾಹ್ಮಣ ಸಮಾಜದ ಮುಂದಿರುವ ಕರ್ತವ್ಯವಾಗಿದೆ.

1,2, ಹಾಗೂ 3ನೇ ತರಗತಿಗಳಿಗೆ ಪ್ರವೇಶಾವಕಾಶವಿದೆ.

**ಆಸಕ್ತರು ಕೂಡಲೇ ಸಂಪರ್ಕಿಸಿರಿ.**


**ವಿಳಾಸ:**
**ಕಾರ್ಯದರ್ಶಿ**
ಮುಖ್ಯೋಪಾಧ್ಯಾಯರು
ವಿಜಯಧ್ವಜ ಜ್ಞಾನಪೀಠ
ಪ್ರಹ್ಲಾದ ಗುರುಕುಲ,
ಶ್ರೀಪೇಜಾರ ಅಧೋಕ್ಷಜ ಮಠ
ಮೊಬೈಲ್: 9964026776, 9844873040

ಶ್ರೀಪೇಜಾವರ ಅಧೋಕ್ಷಜ ಮಠ
ರಥಬೀದಿ, ಉಡುಪಿ-576 101.
ರಥಬೀದಿ, ಉಡುಪಿ-576 101.
ದೂರವಾಣಿ: 0820-2527428


ಭಗವದ್ಗೀತೆ-ವಿಷ್ಣುಸಹಸ್ರನಾಮ-ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.



# ಗುರುನಮನ

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು ಈ ಶತಮಾನ ಕಂಡ ಮುನಿಗಳು. ಮತ್ತೊಬ್ಬರಿಗೆ ಮುನಿಯುವ ಮುನಿಯಲ್ಲ. "ಸ ಮುನಿರ್ವಿದಿತೋ ಯಸ್ತು ಕಾಮ ಕ್ರೋಧ ವಿವರ್ಜಿತಃ" ಕಾಮ ಕ್ರೋಧಗಳನ್ನು ಗೆದ್ದವ ಮುನಿಯಂತೆ.

ಆರು ಅರಿಗಳನ್ನು ಅರಿಗಿಸಿಕೊಂಡವ ಮುನಿ. ಆರು ಅರಿಗಳ ಉರಿಯನ್ನು ಆರಿಸಿಕೊಂಡವ ಮುನಿ.

ಈ ದೃಷ್ಟಿಯಲ್ಲಿ ಈ ಆರು ಅರಿಗಳಿಗೆ ದೂರೀಭೂತರಾದ ಮುನಿವರೇಣ್ಯರು ನಮ್ಮ ಶ್ರೀಗುರುಗಳು.

ಮೌನವುಳ್ಳವ ಮುನಿ. ಮುನಿಯ ಧರ್ಮವೇ ಮೌನ. ಮೌನ ಅಂದರೆ ಮಾತನಾಡದೇ ಇರುವುದು ಅನ್ನುವುದೂ ಒಂದು ಅರ್ಥ. ಮಾತನಾಡದೇ ಇರುವವರನ್ನೆಲ್ಲ ಮುನಿ ಅನ್ನಬಹುದೇ?

ಅದೆಷ್ಟು ಜನ ಮಾತನಾಡದೇ ಇರುವ ಏಡ ಮೂಕರು ನಮ್ಮಲ್ಲಿ ಇದ್ದಾರೆ. ಅದೂ ಒಂದುತರಹ ರೋಗವಾಗಬಾರದು.

ಗೀತೆಯಲ್ಲಿ ದೇವರು ಅಂದರೆ "ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ಎಲ್ಲರೂ ಬಾಯಿಬಿಡುವ ವಿಷಯಗಳ ಬಗ್ಗೆ ಮೂಕನಾಗಿರುವುದೇ ಮೌನ.ಪ್ರಪಂಚದ ಸೆಳತಕ್ಕೆ ಸಿಲುಕದೆ ಸುಮ್ಮನಾಗುವುದೇ ಮೌನ. ಈ ಮೌನವನರಿತು ಆಚರಿಸುವವನೇ ಮುನಿ.

ಶ್ರೀ ವಿದ್ಯಾಮಾನ್ಯ ತೀರ್ಥರಿಗಂತೂ ಇದು ಅಕ್ಷರಶಃ ಸಮನ್ವಯವಾಗುತ್ತೆ. ಭಗವಂತನ ಬಗ್ಗೆ ಮನನ ಮಾಡುವುದೇ ನಿಜವಾದ ಮೌನ.

ಹೊರಗಣ ಮೌನ ಒಳಗಿನ ಮನನಕ್ಕಾಗಿ. ಮಾನಸ ಮಂಥನದಮನನವೇ ಮೌನದ ಮೂಲ ಉದ್ದೇಶ. ಇದೇ ಪೂಜ್ಯ ಗುರುಗಳ ಮೌನ -ಮುನಿತ್ವ. ಮಧ್ಯರಾತ್ರಿಯಲ್ಲೂ ಎಚ್ಚರವಾದರೆ ಮಗ್ಗಲು ತಿರುಗಿಸಿ ಮಲಗುವವರಲ್ಲ. ಅವರು ಪುಸ್ತಕ-ಮಸ್ತಕಗಳ ಪರಸ್ಪರ ಸಂಯೋಜಕರು.ಮತ್ತೆ ಮೌನದ-ಮನನದ ಮುನಿತನದ ತೃಪ್ತಿಯ ಜೀವನದವರು. ಸದಾ ಮನನಶೀಲರು. ಅಷ್ಟೇಕೆ ಮನನೀಯಗುಣವಂತರು. ಹಾಗಾಗಿ ಮುನಿಗಳು.

ಈ ಋಷಿಗಳ ದೇಹದ ಸೌಷ್ಠವವೇ ಮುನಿತನದ ದರ್ಪಣ. ತೇಜಃಪುಂಜದ ದಿವ್ಯ-ದೃಷ್ಟಿಗಳು ಮುನಿತ್ವದ ಪಾರದರ್ಶಕ. ಇಪ್ಪತ್ತು ಲಕ್ಷಣಗಳಿಗಿಂತ ಕಡಿಮೆಯಲ್ಲದವ ಋಷಿಯಂತೆ. ಆತ ಸುಳ್ಳು ಹೇಳಲಾರ. ಈ ಮಹಾತ್ಮರಿಗೆ ಸುಳ್ಳು ಹೇಳಿ ಗೊತ್ತಿಲ್ಲ. ಇವರ ಮಾತೆಲ್ಲ ಮುತ್ತು ರತ್ನ ಋತು-ಸತ್ಯ.

ಅತಿಮಾನವಲಕ್ಷಣಗಳೂ ಇವರ ತನುವಿನಲ್ಲಿ ತೋರುತ್ತಿದ್ದವು. ಪಾದದ್ವಯಗಳಲ್ಲೂ ಸ್ಫುಟವಾಗಿ ತೋರುತ್ತಿದ್ದ ಪದ್ಮರೇಖೆಗಳೇ ಸಾಕ್ಷಿ. ಇದನ್ನು ಗುರುತಿಸಿ ಪಾದ ಸೇವೆ ಮಾಡುವವರಿಗೆ ಈ

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.

ಪ್ರಸಂಗ ಪರಮ ಸೌಭಾಗ್ಯದಾಯಕ. ಇದರ ಸ್ಪರ್ಶಕ್ಕಾಗಿ ಎಲ್ಲರೂ ಹಾತೊರೆಯುತ್ತಿದ್ದರು. ಅಲಂಕಾರಕವಾಗಿ ಅಲ್ಲ. ಪೂರ್ಣಅರ್ಥಗಳಲ್ಲೂ ಪಾದ-ಪದ್ಮಗಳು ಕಂಗೊಳಿಸುತ್ತಿದ್ದವು. ಮುನಿತನದ ಮೂಲ ಬ್ರಹ್ಮಚರ್ಯೆ. ಸನ್ಯಾಸಕ್ಕೆ ಅಪಚಾರಗೈಯುವ ಸಂನ್ಯಾಸಿಗಳೇ ಸುಲಭ. ಧಾವಂತೋ ಅಶ್ಲೀಲಶೀಲರಾದ ಸಂನ್ಯಾಸಿಗಳೂ ಇಲ್ಲಾಂತಿಲ್ಲ.

"ಜನೋ ನಮೇನ್ಸಾಽಪರಧೇತಿ ಮತ್ವಾ" ಎಂಬ ಮಾತಿನಂತೆ ಭೋಗಕ್ಕಾಗಿ ಸಂನ್ಯಾಸಿಗಳಾದವರೂ ಹಲವರು. ಪಲಾಯನ ಗೈಯುವವರೂ ಹಲವರು. ಸಂನ್ಯಾಸಿಗಳಾದ ಮೇಲೆ ತನ್ನನ್ನು ಆಜೀವನಕ್ಕೆ ಒಗ್ಗಿಸಿಕೊಳ್ಳುವವರು ಕೆಲವರು ಮಾತ್ರ. ಹುಟ್ಟು ಸಂನ್ಯಾಸಿಗಳು ಅತಿ ವಿರಳ. ಸನ್ಯಾಸಕ್ಕೆ ಭೂಷಣರಾಗುವವರು ದುರ್ಲಭ. ಇಂಥಾ ಆದರ್ಶ ಯತಿಗಳು ಶ್ರೀ ವಿದ್ಯಾಮಾನ್ಯತೀರ್ಥರು.

"ಖ್ಯಾತಃ ತೇ ಅಗ್ರ್ಯೋಽವತಾರಃ ಸಹಿತ ಇಹ ಬಹು ಬ್ರಹ್ಮಚರ್ಯಾದಿ ಧ ರ್ಮೈಃ" ಇದು ತ್ರಿವಿಕ್ರಮರ ಆರ್ಷವಾಣಿ. ಈ ನಲ್ನುಡಿಯನ್ನೂ ನುಡಿದಾಗಲೆಲ್ಲಾ ಶ್ರೀವಿದ್ಯಾಮಾನ್ಯತೀರ್ಥರು ಸ್ಮೃತಿಯಲ್ಲಿ ಸುಳಿಯುತ್ತಾರೆ.

ಊರ್ಧ್ವರೇತಸ್ಸಿನ ಅಸ್ಖಲಿತ ಬ್ರಹ್ಮಚರ್ಯಕ್ಕೆ ಹೆಸರಾದ ಮತ್ತೊಬ್ಬ ಮಹಾತ್ಮ ದ್ವಾಪರದ ಭೀಷ್ಮ-ದೇವವ್ರತ. ಕಲಿಯುಗದ ಈ ಶತಮಾನ ಕಂಡ ಮಗದೊಬ್ಬ ದೇವವ್ರತ-ಭೀಷ್ಮರು ನಮ್ಮ ಮಹಾಸ್ವಾಮಿಗಳು. ಭೀಷ್ಮರಂತೆ ಗಾಂಗೆಯರು-ನಾದೇಯರು ಇವರು. ಗಂಗೆಯಲ್ಲಿ ಪ್ರತಿವರ್ಷ ಮಿಂದವರು. ಸಕಲ ನದಿಗಳಲ್ಲಿ ನಿರಂತರ ಅವಗಾಹನೆ ಮಾಡಿದವರು. ಮಿಂದಲ್ಲೇ ಗಂಗಾನದಿ ದೇವತೆಗಳ ಸನ್ನಿಧಾನ. ಇಳಿ ವಯಸ್ಸಿನಲ್ಲೂ ಇಳಿಬಾವಿಗಿಳಿದು ಮುಳುಗುವಕಡು ನಿಯಮದ ಸಂಯಮೀಂದ್ರರು. ಮೈ ಕೊರೆಯುವ ಛಳಿಯನ್ನು ಲೆಖ್ಖಿಸದೇ ಬ್ರಾಹ್ಮ ಮುಹೂರ್ತದಲ್ಲಿ ಅವಗಾಹನದ ನಿಯಮವನ್ನು ಜೀವನದುದ್ದಕ್ಕೂ ಸಾಧಿಸಿದ ಸಾಧಕೋತ್ತಮರು ಇವರು.

ಬ್ರಹ್ಮಚರ್ಯಕ್ಕೆ ಎರಡು ಮುಖ. ಒಂದು ತ್ಯಾಗ ಇನ್ನೊಂದು ಯೋಗ. ಹಾಗಾಗಿ ಬ್ರಹ್ಮಚಾರಿಗಳು ತ್ಯಾಗಿಗಳೂ ಹೌದು. ಯೋಗಿಗಳೂ ಆಗಬೇಕು. "ವೇಧಾಃ ತ್ರೇಧಾ ಭ್ರಮಂ ಚಕ್ರೇ ಕಾಂತಾ ಕಾಂಚನ ಕಾಶ್ಯಪಂ" ಸೃಷ್ಟಕರ್ತನೇ ಎಂತಹವನನ್ನೂ ಕಾಂತಾ(ಹೆಣ್ಣು) ಕಾಂಚನ(ಹೊನ್ನು) ಕಾಶ್ಯಪ(ಮಣ್ಣು) ಈ ಮೂರರ ಭ್ರಮ ಸುಳಿಯಲ್ಲಿ ಸಿಲುಕಿಸುತ್ತಾನೆ. ಈ ಮೂರನ್ನು ಗೆದ್ದವ ಮಹಾತ್ಯಾಗಿ. ನಿಜವಾದ ಬ್ರಹ್ಮಚಾರಿ. ಇಂಥಾ ತ್ಯಾಗದ ಬ್ರಹ್ಮಚಾರಿ ನಮ್ಮ ಪರಮ ಪೂಜ್ಯರು.

ತನಗೆಂದೇ ಭಕ್ತರು ಅರ್ಪಿಸಿದ ಹೊನ್ನ-ರನ್ನಹಾರಗಳನ್ನೆಲ್ಲಾ ಶ್ರೀ ಹರಿಗೆ ಅರ್ಪಿಸಿ ಅರ್ಚಿಸಿದವರು. ಶ್ರೀಕಾಂತನ ಏಕಾಂತತೆಯಿಂದ ಶಾಂತರಾಗಿ ಕಾಂತೆಯನ್ನು ಕಣ್ಣೆತ್ತಿಕಾಣದ ಅಪರೂಪದ ಕಾವಿಧಾರಿ ಇವರು. ಕಾಶ್ಯಪೀಗಾಗಿ(ಮಣ್ಣು) ಪಾಶವೀವೃತ್ತಿಗಿಳಿಯದ ಪಶುಪತಿ ಇವರು. ಆಶಾ ಪಾಶಕ್ಕೊಳಗಾಗದ ಶುದ್ಧಕಾಶ್ಯಪರಿವರು.

ಬಲಿಯನ್ನು ಬಲಿಗೈದು ಮೂರು ಹೆಜ್ಜೆಯಿಂದ ಮೂರನ್ನಳೆದು ಬಂದದ್ದನ್ನೆಲ್ಲಾ ಮಹಾತ್ಮರಿಗೆ ದಾನವಿತ್ತ ಮಹೇಂದ್ರಾನುಜ ವಾಮನನೂ ಹೌದು! ಭಿಕ್ಷುವೃತ್ತಿಗೈದದ್ದು ಹೌದು. ತನಗಾಗಿ ಅಲ್ಲ. ತನ್ನವರಿಗಾಗಿ ಅಲ್ಲ. ಹರಿ-ಜನರಿಗಾಗಿ. ಹರೀಂದ್ರದಾಸರಿಗಾಗಿ. ನೂರಾರು ಬ್ರಹ್ಮಚಾರಿಗಳನ್ನು ಸಾಕುವುದಕ್ಕಾಗಿ. ಹಲವಾರು ವರಪಂಡಿತ ಮಂಡಲಿಯ ನಿರ್ಮಾಣಕ್ಕಾಗಿ.

**ಪ್ರಾಣಿ ಹಿಂಸೆ ಮಾಡಬೇಡಿ**



ಬ್ರಹ್ಮಚರ್ಯದ ಇನ್ನೊಂದು ಮುಖ ಯೋಗ-ಮನೋಯೋಗ. ವೇದ-ವೇದಾಂತಗಳ ಅಧ್ಯಯನ-ಅಧ್ಯಾಪನದ ಯೋಗ. ಬ್ರಹ್ಮ ಎಂದರೆ ವೇದ-ವೇದಾಂತಗಳು. ಅದರ ಅಧ್ಯಯನವೇ ಚರಣ. ನಿರಂತರ ಅಧ್ಯಯನ ಅಧ್ಯಾಪನಗಳೇ ನಿಜವಾದ ಯೋಗ. "ಏತೇನ ಯೋಗಃ ಪ್ರತ್ಯುಕ್ತಃಽ" ವ್ಯಾಸರೂ ಹಠಯೋಗಗಳನ್ನು ಹಳಿದಿದ್ದಾರೆ.

ಶ್ರೀಸತ್ಯಧ್ಯಾನತೀರ್ಥರ ಗರಡಿಯಲ್ಲಿ ತಯಾರಾದ ಶ್ರೀವಿದ್ಯಾಮಾನ್ಯತೀರ್ಥರು ಜ್ಞಾನಿಯೋಗಿಗಳು. ಬ್ರಹ್ಮಚಾರಿಗಳು. ಈ ತ್ಯಾಗ ತ್ಯಾಗಕ್ಕಾಗಿ ಅಲ್ಲ. ಯೋಗ ಯೋಗಕ್ಕಾಗಿಲ್ಲ. ಹರಿ ಪ್ರೀತಿಗಾಗಿ-ಹರೀಂದ್ರ ಪ್ರೀತಿಗಾಗಿ ಮಧ್ವರಪ್ರೀತಿಗಾಗಿ-ಮಧ್ವೇಶನ ಪ್ರೀತಿಗಾಗಿ. ಶ್ರೀ ಹರಿಗೆ ಅಂತಃ ಕರಣದ ಹೊನಲು ಹರಿಸಿದರು. ಹರೀಂದ್ರನಿಗೆ ಭಕ್ತಿಯ ಪೂರ ಹರಿಸಿದರು.

ದ್ವಾರಕೆಯ ಕೃಷ್ಣ ಮಧ್ವರಿಗೊಲಿದ. ಮಧ್ವರು ಶ್ರೀ ವಿದ್ಯಾಮಾನ್ಯರಿಗೊಲಿದರು. ಹೃಷೀಕಗಳನ್ನು ಹೃಷೀಕೇಶನಿಗೆ ಅರ್ಪಿಸಿ ಹೃದ್ಯರಾದರು ಶ್ರೀವಿದ್ಯಾಮಾನ್ಯರು. ಹೃಷೀಕೇಶ ಹೃಷೀಕೇಶ ಸಂಸ್ಥಾನವನ್ನು ಶ್ರೀವಿದ್ಯಾಮಾನ್ಯರಿಗೆ ಒಪ್ಪಿಸಿ ತುಷ್ಟನಾದ. ಶ್ರೀಹೃಷೀಕೇಶತೀರ್ಥರು ದಾಖಲಿಸಿದ ಸರ್ವಮೂಲವನ್ನು ಶ್ರೀವಿಶ್ವೇಶರ ಸಹಕಾರದೊಂದಿಗೆ ಮುದ್ರಿಸಿ ಶ್ರೀಹೃಷೀಕೇಶತೀರ್ಥರನ್ನು ಆರಾಧಿಸಿದರು. ಹೃಷೀಕೇಶತೀರ್ಥರೂ ಶ್ರೀ ವಿದ್ಯಾಮಾನ್ಯರಿಗೆ ಎರಡು ಬಾರಿ ಹೃಷೀಕೇಶನ ಪೂಜೆಗೈಸಿ ಜಯಭೇರಿಗಳಿಸಿಕೊಟ್ಟರು. ಶ್ರೀಲೋಲನಿಗೆ ಚಿನ್ನದ ತೊಟ್ಟಿಲ ಒಪ್ಪಿಸಿ ತನ್ನ ಅಚ್ಚಿನ್ನ ಭಕ್ತಿಯ ತೊಟ್ಟಿಲಲ್ಲಿ ಆತನನ್ನು ತೂಗಿದರು. ಶ್ರೀಹರಿಗೆ ಹೊನ್ನ ತೇರನ್ನು ಸಮರ್ಪಿಸಿ ಅವನನ್ನು ತನ್ನ ಮನೋರಥದಲ್ಲಿಟ್ಟು ಭಕ್ತಪಾಶದಿಂದ ಎಳೆದು ರಥೋತ್ಸವಗೈದರು. ಶ್ರೀಹರಿಗೆ ವಜ್ರದ ಮುಕುಟಧಾರಣೆ ಮಾಡಿಸಿ ಇತಿಹಾಸದ ಪುಟದಲ್ಲಿ ವಜ್ರಕಾಯರಾದರು. ಯತಿಮುಕುಟ ಮಾನ್ಯರಾದರು. ಸ್ವರ್ಣವರ್ಣರಾದ ಶ್ರೀ ಹರೀಂದ್ರರಿಗೆ ಸ್ವರ್ಣ-ಕವಚವಿತ್ತರು. ರಜತಪೀಠದ ಆರಾಧ್ಯಮಾನ ಅನಂತಾಸನನ ಆರಾಧಕರು. ಆಲ್ಲರುವ ಮಧ್ವಮಂಟಪ ರಜತಮಂಟಪವಾಯಿತು ಇವರಿಂದ.

ಹರಿಪ್ರೀತಿ ಅನ್ಯಾದೃಶ-ಅಸದೃಶ. ಯತಿಗಳಿಗೆ ವಿಹಿತವಾದ ಪ್ರಣವ-ಅಷ್ಟ ಮಹಾಮಂತ್ರ, ತಂತ್ರಸಾರೋಕ್ತಮಂತ್ರಗಳ ಜಪ.

ಪ್ರತಿಯೊಂದೂ ಸಿದ್ದಮಂತ್ರ ಇವರಿಗೆ. ಪಯೋವ್ರತದಿಂದ ಅಕ್ಷರ ಲಕ್ಷ ಜಪಿಸಿದ ಸಾಧಕರು. ಹರಿಪ್ರೀತಿ ಸಂಪಾದಕರು. ಪೂಜೆಯ ಏಕಾಗ್ರತೆ, ಶೌಚಾ-ಆಚಾರನಿಷ್ಠೆ, ಏಕಾದಶೀವ್ರತಾಚರಣೆಯಿಂದ ಪುನೀತರು. ಸುವಿದ್ಯಾ-ಚತುಃಶಾಸ್ತ್ರಗಳಲ್ಲೂ ಅಗಾಧ ಪಾಂಡಿತ್ಯ. ಒಂದೊಂದು ವಿದ್ಯೆಗಾಗಿ ಒಬ್ಬೊಬ್ಬರನ್ನು ಅರಸಬೇಕಾಗಿಲ್ಲ. ಸಕಲ ವಿದ್ಯೆಗಳ ಖನಿ ಶ್ರೀವಿದ್ಯಾಮಾನ್ಯರು. ಶ್ರೀ ವಿದ್ಯಾಮಾನ್ಯರು ವಿದ್ಯಾದೇವಿಯ ದರ್ಪಣ.

**ನೀಚರನಾಶ್ರಯಿಸಿ ಕೆಡಬೇಡಿ.**

ಹತ್ತಾರು ಪೀಠಾಧಿಪತಿಗಳ, ಸಂನ್ಯಾಸಿಗಳ ತಂಡೋಪತಂಡಗಳ ನಿರ್ಮಾಣವೇ ಇದಕ್ಕೆ ಉಜ್ವಲ ನಿದರ್ಶನ. ಅವರು ಬರೆದ ಗ್ರಂಥಗಳೂ ಜ್ವಲಂತಸಾಕ್ಷಿ. "ಅದ್ವೈತ ತತ್ವ ಸುಧಾ ಸಮೀಕ್ಷಾ", "ಸಹಸ್ರದೂಷಣೀ"ಯಂತಹ ಗ್ರಂಥ. ದ್ವೈತ–ಅದ್ವೈತ ಗ್ರಂಥಗಳ ಮೇಲೆ ಅವರಿಗಿದ್ದ ಪ್ರಭುತ್ವಕ್ಕೆ ಉದಾಹರಣೆ "ತತ್ವಮಾರ್ತಾಂಡ ವಿಮರ್ಶೆ". "ಅಥ ಶಬ್ದ ವಿಚಾರ"ದಂಥ ಗ್ರಂಥಗಳು ದ್ವೈತ–ವಿಶಿಷ್ಟಾದ್ವೈತ ಗ್ರಂಥಗಳ ಪ್ರಭುತ್ವಕ್ಕೆ ದಿಕ್ಸೂಚಿ. ಶ್ರೀಮನ್ನ್ಯಾಯಸುಧಾಮಂಗಳ ಸಂದರ್ಭಗಳಲ್ಲಿ ಚರ್ವಿತಚರ್ವಣ ಅನುವಾದ ಇವರು ನಡೆಸುತ್ತಿರಲಿಲ್ಲ. ಅಪೂರ್ವ ಅನುಪಮ ಅನುವಾದ. ಕೆಲವು ಅನುವಾದ ಮುದ್ರಣಗೊಂಡಿದೆ. 88ರ ಇಳಿ ವಯಸ್ಸಲ್ಲೂ ಇವರ ಚಿಂತನೆಯಲ್ಲಿ ನಿತ್ಯನೂತನೆಯಿತ್ತು. ಪಾಠ–ಪ್ರವಚನ ಪ್ರತಿಯೊಂದೂ ಏಕಮೇವ ಅದ್ವಿತೀಯಮ್– ಇಂಥ ಅದ್ಭುತ ಪ್ರತಿಭೆಯಿಂದ ಅರಳಿದ ಸುವಿದ್ಯೆಯಿಂದ ನಾಡಿನಾದ್ಯಂತ ಹೆಸರು ಮಾಡಿದವರು.

ತುಂಬಿದ ಪ್ರತಿವಾದಿ ಸಭೆಯಲ್ಲಿ ಏಕಾಕಿಯಾಗಿ ಹೋರಾಡಿದ ಅಪ್ರತಿಮವೀರರು. ವಾದದಲ್ಲೂ ಭಾಗವಹಿಸಿದ್ದಾರೆ. ಜಲ್ಪ–ವಿತಂಡಗಳಲ್ಲೂ ಭಾಗವಹಿಸಿದ್ದಾರೆ. ಮಾಯಾವಾದದ ಮಾಯೆಯಿಂದ ಜಗತ್ತನ್ನೇ ಮಾಯೆಗೊಳಿಸಿದ ಉತ್ತರದಲ್ಲೂ ತನ್ನ ವಾದದಿಂದ ಹಿಮಗಿರಿಯಂತೆ ಎತ್ತರಕ್ಕೇರಿದವರು. ಅದ್ವೈತವನ್ನು ಸಮರ್ಥಿಸಿದರೆ ಸರ್ವಸ್ವ ಸಮರ್ಪಿಸುವ ಕರಪತ್ರ ಅಂಟಿಸಿ ನಗಾರಿ ಬಡಿಸಿ ಘೋಷಣೆಮಾಡಿದಧೀರರು. ಕರಪಾತ್ರಿಗಳಂಥ ಪ್ರಚಂಡ ಮಾಯಿಗಳನ್ನು ಗೆದ್ದ ಅದ್ಭುತ ಸಾಹಸಿ.

ಲೋಕಕ್ಷೇಮಕ್ಕಾಗಿ ಅಷ್ಟಗ್ರಹಯೋಗಕಾಲದಲ್ಲಿ ಅಷ್ಟೂ ಉತ್ತರ ಭಾರತದ ಆಗ್ರಹವಂತರ ಮಧ್ಯೆ ಯಾಗ ನಡೆಸಿದ ಮಹಾಯೋಗಿಗಳು. ಪರಕೀಯರ ದಾಳಿಯಿಂದ ದೇಶದ ಸಂರಕ್ಷಣೆಯೂ ಅಗತ್ಯ. ಅದಕ್ಕಿಂತಲೂ ಶಾಸ್ತ್ರಗಳ ಮಧ್ವರ ಸಂದೇಶಗಳ ಬಗ್ಗೆ ಪರಮತ ದಾಳಿಯಿಂದ ರಕ್ಷಿತರಾಗಬೇಕೆನ್ನುವುದು ಇವರ ಅಂತರಾಳದ ಕರೆ. ಸ್ವಕ್ಷೇತ್ರದ ಪ್ರಾಬಲ್ಯವಿದ್ದ ಶೃಂಗೇರಿಯಲ್ಲಿಯೇ ಇಬ್ಬರು ಪೀಠಾಧೀಶರ ಜೊತೆಗೆ, ಕಾಂಚಿಯಲ್ಲಿ ಪೀಠಾಧೀಶತ್ರಯರ ಜೊತೆಗೆ ನಡೆಸಿದ ವಾದಗಳಂತೂ ಜರಾಸಂಧನನ್ನು ಮರ್ಧಿಸಿದ ಶ್ರೀಭೀಮಸೇನದೇವರ ಸ್ಮರಣೆ ಮಾಡಿಸುತ್ತದೆ.

88ರ ಇಳಿವಯಸ್ಸಿನಲ್ಲೂ ಅಹೋಬಲ ಶ್ರೀಗಳ ಸೌಹಾರ್ದಯುತ ಭೇಟಿಯಲ್ಲಿ ಆನಂದತಾರತಮ್ಯವನ್ನು ಸಮರ್ಥಿಸಿ ಶ್ರೀಗಳವರನ್ನು ಮೂಕವಿಸ್ಮಯರನ್ನಾಗಿಸಿದ ಶ್ರೀಗಳವಾದ ವಿಶಾರದತೆ ನಿರ್ವಿವಾದ.

ತ್ರಿವಿಕ್ರಮಪಂಡಿತರಿಂದ ಆಶ್ಚರ್ಯಚಕಿತವಾದ "ತೇನಮಃ ಕೌಶಲಾಯ" ಅನ್ನುವ ವಾಕ್ಯ ಶ್ರೀಮದಾನಂದತೀರ್ಥರ–ಭಾರತೀರಮಣ ವಿಶೇಷ ಸನ್ನಿಧಾನ ಪಾತ್ರರಾದ ಶ್ರೀವಿದ್ಯಾಮಾನ್ಯತೀರ್ಥರನ್ನು ನೆನಪಿಸುತ್ತದೆ.

ಅರಳು–ಮರಳು ವಯಸ್ಸಿನಲ್ಲೂ ಮತ್ತೆ ಜ್ಯೋತಿಷ ಅಧ್ಯಯನಮಾಡಿ ಏಕಾದಶಿ ಬಗ್ಗೆ ಮರಳಿ ಅರಳಿದ ಸರ್ವಮಾನ್ಯರು ಶ್ರೀವಿದ್ಯಾಮಾನ್ಯರು. ಏಕಾದಶಿಯ ವ್ರತಾಚರಣೆಯ ಏಕತೆಗಾಗಿ ಸೆಣಸಾಡಿದ ಹುತಾತ್ಮರು. ಮಾತುಬಾರದ ಮಕ್ಕಳಿಗೆ ಮಂಡಲಪರ್ಯಂತ ವ್ಯಾಸಮಂತ್ರ ಮಂತ್ರಿಸಿದ ಮಂತ್ರೋದಕವಿತ್ತು ಮಾತು ಇತ್ತ ಭಾರತೀಮಾತೆಯ ಕುಮಾರರಿವರು. ಗಂಡು ಕಾಣದೇ ಗಂಡಾಂತರಕ್ಕೊಳಗಾಗುವ ಹೆಣ್ಣುಗಳಿಗೆ ಮಂತ್ರ–ಮಂತ್ರಾಕ್ಷತೆಯಿಂದ ಮದುವೆ ಮಾಡಿಸಿ

ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ.



ಮಂಗಳಸೂತ್ರ ಕಟ್ಟಿಸಿದ ಮಂಗಳಾತ್ಮರು ಇವರು. ಸಂತಾನಶೂನ್ಯಮಾತೆಯರ ಮನು ಮಂತ್ರಿತ ಮಂತ್ರಾಕ್ಷತೆಯಿಂದ ಮನಸ್ಸುಪೂರೈಸಿದ ಮಹಿತಾತ್ಮರು ಇವರು.

ಸ್ತಬ್ಧಬುದ್ಧಿಗಳಿಗೆ ಬುದ್ಧಿಪ್ರಚೋದಕರಾದ ಅನ್ವರ್ಥಕ ಶುದ್ಧಬುದ್ಧಿ ಇವರು. ಮಂತ್ರಪೂತಮೃತಿಕೆಯಿಂದ ತೊನ್ನುರೋಗವನ್ನು ದೂರ ಸರಿಸದ ಭವರೋಗವೈದ್ಯರು. ಕೇಳಿದವರಿಗೆ ಕೇಳಿದ್ದನ್ನು ಕೊಟ್ಟರು. ಬೇಡಿದವರಿಗೆ ಬೇಡಿದ್ದನ್ನು ನೀಡಿದರು. ಕಾಡಿದವರಿಗೆ ಕಾಡಿದ್ದನ್ನು ಕೊಡಿಸಿದರು.

ಈ ಶತಮಾನದ ಕಾಮಧೇನು–ಕಲ್ಪವೃಕ್ಷ–ಚಿಂತಾಮಣಿ–ಶ್ರೀವಿದ್ಯಾಮಾನ್ಯರು. ಇಷ್ಟದರು ಅಭೀಷ್ಟಪ್ರದರು ಇವರು. ಕಷ್ಟಹರ್ತೃಗಳು–ಅನಿಷ್ಟನಿವಾರಕರು. ಇಂಥಾಮುನಿಗಳಿಗೆ ಮಣಿಯೋಣ. ಕೈ ಮುಗಿಯೋಣ.

34ನೇ ಪುಟದಿಂದ ಮುಂದುವರಿದುದು.

ನೈವೇದ್ಯವು ಗ್ರಾಹ್ಯವೇ ಎಂದು ಆ ಪ್ರಮಾಣದಿಂದ ಸೂಚಿತವಾಗುವುದು. ಯಾಕೆಂದರೆ 'ಪರಶುಕ್ಲತ್ರಯ'ದಲ್ಲಿ ಸೇರಿರುವ ವಾಯುದೇವ ಹೇಗೆ ಪರಮಾತ್ಮನ ವಿಷಯದಲ್ಲಿ ಪರಿಶುದ್ಧನಾಗಿರುವನೋ ಅಂತೆಯೇ ಲಕ್ಷ್ಮೀ, ಬ್ರಹ್ಮ, ಸರಸ್ವತಿ, ಭಾರತಿಯರೂ 'ಪರಶುಕ್ಲತ್ರಯ'ದಲ್ಲಿ ಸೇರಿದವರಾಗಿದ್ದು ಭಗವಂತನ ವಿಷಯದಲ್ಲಿ ವಿಪರೀತಜ್ಞಾನ, ವಿರೋಧಾದಿ ದೋಷಗಳಿಗೆ ಪಾತ್ರರಾಗದ ಪ್ರಯುಕ್ತ ಪರಿಶುದ್ಧರೆನಿಸಿರುವರು. ಅಂತಹವರಿಗೆ ನೈವೇದ್ಯವನ್ನು 'ಪರಿಶುಕ್ಲತ್ರಯ'ರಿಗೂ ಸಮರ್ಪಿಸಿ ಸ್ವೀಕರಿಸಬೇಕೆಂದು ಆ ಪ್ರಮಾಣದಿಂದ ಸೂಚಿತವಾಗಬಲ್ಲದು.

ಇವರಿಗಿಂತ ಇತರ ದೇವತೆಗಳಾದರೆ ಭಗವಂತನ ವಿಷಯದಲ್ಲಿ ವಿಪರೀತ ಜ್ಞಾನ, ವಿರೋಧಾದಿ ದೋಷಗಳಿಗೆ ಪಾತ್ರರಾಗುವರು. ಔರಾವೇಶಕ್ಕೊಳಗಾಗಬಲ್ಲ ಆ ದೇವತೆಗಳು ಅಷ್ಟು ಪವಿತ್ರರಲ್ಲ ಎಂದ ಮೇಲೆ ಅಂತಹವರಿಗೆ ನೈವೇದ್ಯವನ್ನು ಸಮರ್ಪಿಸಿದಲ್ಲಿ ಅದು ಅಪವಿತ್ರವೆನಿಸಬಲ್ಲದೆಂಬ ಅಭಿಪ್ರಾಯದಲ್ಲಿ ಶಾಸ್ತ್ರ ಅಂತಹ ಇತರ ದೇವತೆಗಳಿಗೆ ಸಮರ್ಪಿಸಿದ ನೈವೇದ್ಯವನ್ನು ಸ್ವೀಕರಿಸಬಾರದೆಂದು ಎಚ್ಚರಿಸಿದೆ.

ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ.